ಕರ್ನಾಟಕ ಸರ್ಕಾರ

## ಕಂದಾಯ ಇಲಾಖೆ

Revenue Department

# ವಾರ್ಷಿಕ ವರದಿ

೧೯೭೪-೭೫

# ಕಂದಾಯ ಇಲಾಖೆ

## ವಾರ್ಷಿಕ ವರದಿ

## 1994–95

# ಕಂದಾಯ ಇಲಾಖೆ

## ವಾರ್ಷಿಕ ವರದಿ

## 1994-95


| ಅನುಕ್ರಮಣಿಕೆ | ಪುಟಸಂಖ್ಯೆ. |
|---|---|
| 1. ಪೀಠಿಕೆ | – 1 |
| 2. ಕಂದಾಯ ಇಲಾಖೆಯ ವ್ಯವಸ್ಥಿತ ಕಾರ್ಯಾಂಗದ ರಚನೆ | – 2 |
| 3. ಪ್ರಕೃತಿ ವಿಪ್ಲವ (ನೈಸರ್ಗಿಕ ಆಪತ್ತು) | 3 – 6 |
| 4. ಭೂ ಮಂಜೂರಾತಿ | 6 – 7 |
| 5. ಭೂ ಸುಧಾರಣೆ | 7 – 9 |
| 6. ಭೂ ಕಂದಾಯ | 9 – 11 |
| 7. ಭೂ ಸ್ವಾಧೀನ | 11 – 12 |
| 8. ಮನೆ ಮತ್ತು ಬಾಡಿಗೆ ನಿಯಂತ್ರಣ | 12 – 13 |
| 9. ನೋಂದಣಿ ಮತ್ತು ಮುದ್ರಾಂಕ | 14 – 15 |
| 10. ಭೂ ಮಾಪನ | 15 – 20 |
| 11. ಮುಜರಾಯಿ | 20 – 24 |
| 12. ಸೇವೆಗಳು | 24 – 26 |
| 13. ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ | 26 – 27 |
| 14. ಪುನರ್ವಸತಿ | – 27 |
| 15. ಸಾರ್ವಜನಿಕ ಕುಂದುಕೊರತೆಗಳು | – 28 |
| 16. ವಿಶೇಷ ಕೋಶ | – 28 |
| 17. ಕಾನೂನು ಕೋಶ | – 29 |
| 18. ಕಂದಾಯ ಕೈಪಿಡಿ | – 29 |
| 19. ವಕ್ಫ್ | 29 – 31 |
| 20. ಹಜ್ | 32 – 33 |
| 21. ಯೋಜನಾ ಕಾರ್ಯಕ್ರಮಗಳು | 33 – 34 |

# 1. ಪೀಠಿಕೆ

ಶ್ರೀ ಆರ್.ಎಲ್.ಜಾಲಪ್ಪ, ಮಾನ್ಯ ಕಂದಾಯ ಸಚಿವರು ಕಂದಾಯ ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. ಇಲಾಖೆಯಲ್ಲಿ ಇಬ್ಬರು ಕಾರ್ಯದರ್ಶಿಗಳು ಇದ್ದು ಅವರಲ್ಲಿ ಒಬ್ಬರು ಪ್ರಧಾನ ಕಾರ್ಯದರ್ಶಿ ಇರುತ್ತಾರೆ. ರಾಜ್ಯದಲ್ಲಿ 4 ಕಂದಾಯ ವಿಭಾಗಗಳು ಇದ್ದು ಪ್ರತಿಯೊಂದು ವಿಭಾಗಗಳಿಗೆ ವಿಭಾಗಾಧಿಕಾರಿ ಹಾಗೂ ಪ್ರತಿಯೊಂದು ಜಿಲ್ಲೆಗೆ ಜಿಲ್ಲಾಧಿಕಾರಿ ಇರುತ್ತಾರೆ.

ಭೂ ಕಂದಾಯ ಆಡಳಿತಕ್ಕೆ ಸಂಬಂಧಪಟ್ಟಂತೆ ಕಂದಾಯ ಇಲಾಖೆಯು ನಾನಾ ಕಾಯಿದೆ ಮತ್ತು ನಿಯಮಗಳ ಆಡಿಯಲ್ಲಿ ಕಾರ್ಯ ನಿರ್ವಹಿಸುತ್ತಾ ಇರುತ್ತದೆ. ಕೆಲವು ಮುಖ್ಯವಾದ ಕಾಯಿದೆಗಳು ಮತ್ತು ನಿಯಮಗಳು ಕೆಳ ಕಂಡಂತೆ ಇವೆ.

1) ಕರ್ನಾಟಕ ಭೂ ಕಂದಾಯ ಕಾಯಿದೆ,1964 ಮತ್ತು ನಿಯಮಗಳು
2) ಕರ್ನಾಟಕ ಭೂ ಸುಧಾರಣಾ ಕಾಯಿದೆ, 1961 ಮತ್ತು ನಿಯಮಗಳು
3) ಕರ್ನಾಟಕ ಭೂ ಸ್ವಾಧೀನ ಕಾಯಿದೆ, 1984 ಮತ್ತು ನಿಯಮಗಳು
4) ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯಿದೆ, 1961 ಮತ್ತು ನಿಯಮಗಳು
5) ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1968
6) ಕರ್ನಾಟಕ ಭೂ ಮಂಜೂರಾತಿ ನಿಯಮಗಳ ತಿದ್ದುಪಡಿ, 1991 – ಬಗರ ಹುಕುಂ ಸಾಗುವಳಿ ಸಕ್ರಮೀಕರಣಕ್ಕೆ ಸಂಬಂಧಿಸಿದಂತೆ
7) ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಕೆಲವು ಜಮೀನುಗಳ ಪರಬಾರೆ ನಿಷೇಧ ಕಾಯಿದೆ, 1978
8) ಕೆಲವು ಇನಾಂ ರದ್ದಿಯಾತಿ ಕಾಯಿದೆ ಮತ್ತು ನಿಯಮಗಳು
9) ಕೆಲವು ಧಾರ್ಮಿಕ ದತ್ತಿ ಕಾಯಿದೆ ಮತ್ತು ನಿಯಮಗಳು
10) ಕರ್ನಾಟಕ ಮುದ್ರಾಂಕ ಮತ್ತು ನೋಂದಣಿ ಕಾಯಿದೆ.

ಕಂದಾಯ ಇಲಾಖೆಯ ಅಧಿಕಾರಿಗಳಿಗೆ ವಹಿಸಿರುವ ಕೆಲವು ಮುಖ್ಯವಾದ ಕಾರ್ಯಗಳು ಕೆಳಕಂಡಂತೆ ಇರುತ್ತವೆ.

1) ಪ್ರಕೃತಿ ವಿಕೋಪದ ಅಡಿಯಲ್ಲಿ ಪರಿಹಾರ ನೀಡುವುದು
2) ಚುನಾವಣಾ ಕೆಲಸ ನಿರ್ವಹಿಸುವುದು
3) ಜನಗಣತಿ ಕೆಲಸ ನಿರ್ವಹಿಸುವುದು
4) ಕಾನೂನು ಮತ್ತು ಶಿಸ್ತು ಪಾಲನೆ
5) ಸಾರ್ವಜನಿಕ ಕುಂದುಕೊರತೆ ವಿಚಾರಣೆ
6) ಆಹಾರ ಮತ್ತು ನಾಗರೀಕ ಸರಬರಾಜು
7) ಪುನರ್ ವಸತಿ
8) ಹಲವಾರು ಮಂಡಳಿ ಮತ್ತು ಪ್ರಾಧೀಕಾರದ ಆಡಳಿತ ನಿರ್ವಹಣೆ
9) ಸಭೆಗಳನ್ನು ನಡೆಸುವುದು, ತಾಲೂಕು ಮತ್ತು ಜಿಲ್ಲಾಮಟ್ಟದ ಎಲ್ಲಾ ಇಲಾಖೆಯ ಸಮನ್ವಯ ಕೆಲಸ ನಿರ್ವಹಿಸುವುದು
10) ಶಿಷ್ಟಾಚಾರ.

## 2. ಕಂದಾಯ ಇಲಾಖೆಯ ವ್ಯವಸ್ಥಿತ ಕಾರ್ಯಾಂಗದ ರಚನೆ

**ಕಂದಾಯ ಸಚಿವರು**

- **ಸರ್ಕಾರದ ಪ್ರಧಾನ ಕಾರ್ಯದರ್ಶಿ**
  - **ವಿಭಾಗಾಧಿಕಾರಿಗಳು**
    (ವಿಭಾಗಕ್ಕೆ ಒಬ್ಬರಂತೆ 4 ವಿಭಾಗಗಳು ಅಂದರೆ ಬೆಂಗಳೂರು, ಮೈಸೂರು, ಗುಲ್ಬರ್ಗಾ ಮತ್ತು ಬೆಳಗಾಂ)
    - **ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ದಂಡನಾಧಿಕಾರಿಗಳು**
      ( ಜಿಲ್ಲೆಗೆ ಒಬ್ಬರಂತೆ 20 ಕಂದಾಯ ಜಿಲ್ಲೆಗಳಿಗೆ)
      - **ಸಹಾಯಕ ಆಯುಕ್ತರು ಮತ್ತು ಉಪ ವಿಭಾಗ ದಂಡನಾಧಿಕಾರಿಗಳು**
        (ಒಬ್ಬರಂತೆ ಎಲ್ಲಾ ಉಪ ವಿಭಾಗಗಳಲ್ಲಿ)
        - **ತಹಶೀಲ್ದಾರರು ಮತ್ತು ತಾಲೂಕು ಕಾರ್ಯನಿರ್ವಾಹಕ ದಂಡನಾಧಿಕಾರಿಗಳು**
          (ಒಬ್ಬರಂತೆ ಎಲ್ಲಾ ತಾಲೂಕುಗಳಲ್ಲಿ)
- **ಸರ್ಕಾರದ ಕಾರ್ಯದರ್ಶಿ-2**
  - **ಆಯುಕ್ತರು ಮತ್ತು** ನೋಂದಣಿ ಪರಿವೀಕ್ಷಕರು ಮುದ್ರಾಂಕ ಮತ್ತು ನೋಂದಣಿ ಇಲಾಖೆ
  - **ನಿರ್ದೇಶಕರು** ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ
  - **ಆಯುಕ್ತರು** ಧಾರ್ಮಿಕ ದತ್ತಿ ಇಲಾಖೆ
  - ವಕ್ಫ್ ಮತ್ತು ಹಜ್ ಸಮಿತಿ
- **ಕಂದಾಯ ಕೈಪಿಡಿಯ ಇಂದೀಕರಿಸುವ ವಿಶೇಷ ಅಧಿಕಾರಿ**

-3-

## 3. ಪ್ರಕೃತಿ ವಿಪ್ಲವ (ನೈಸರ್ಗಿಕ ಆಪತ್ತು)

ಪ್ರಸಕ್ತ ದಶಕದಲ್ಲಿ ಕರ್ನಾಟಕದಲ್ಲಿನ ಋತುಮಾನ ಪರಿಸ್ಥಿತಿಯಲ್ಲಿ ತೀವ್ರತರವಾದ ಬದಲಾವಣೆಗಳು ಸಂಭವಿಸಿವೆ. ಪಶ್ಚಿಮ ಘಟ್ಟಗಳ ಮತ್ತು ಕರಾವಳಿ ಜಿಲ್ಲೆಗಳಲ್ಲಿನ ಸಾಮಾನ್ಯವಾದ ಪ್ರವಾಹ ಹಾಗೂ ಉತ್ತರ ಒಳನಾಡಿನ ಬರದ ಸಾಮಾನ್ಯ ಚಿತ್ರ, 1990 ರಿಂದೀಚೆಗೆ ಪರಿಣಾಮಕಾರಿಯಾಗಿ ಬದಲಾಗಿದೆ. ಕರ್ನಾಟಕವು ನಿರಂತರವಾಗಿ ಒಂದಲ್ಲಾ ಒಂದು ವಿಧದ ನೈಸರ್ಗಿಕ ವಿಕೋಪವನ್ನು ಪ್ರತಿ ವರ್ಷವೂ ಎದುರಿಸುತ್ತಿದೆ.

ಒಂದೇ ಸಮಯದಲ್ಲಿ ತೀವ್ರವಾದ ಬರ ಹಾಗೂ ಭಾರಿ ಮಳೆ:ಪ್ರವಾಹವನ್ನು ಕಾಣಬೇಕಾಗಿ ಬಂದ ರಾಜ್ಯಕ್ಕೆ, 1991ರ ಸ್ಥಿತಿ ಪುನರಾವರ್ತನೆಯಾದ ಹಾಗಿದೆ. 16 ಜಿಲ್ಲೆಗಳಲ್ಲಿನ 95 ತಾಲ್ಲೂಕುಗಳ ಭಾರಿ ಮಳೆ : ಪ್ರವಾಹ ಸ್ಥಿತಿ ಕಂಡರೆ; 12 ಜಿಲ್ಲೆಗಳಲ್ಲಿನ 72 ತಾಲ್ಲೂಕುಗಳು ಬರದ ದವಡೆಗೆ ಸಿಕ್ಕಿ ನಲುಗಿದವು. ಜಿಲ್ಲೆಯೊಂದರಲ್ಲೇ ಬರ ಹಾಗೂ ಪ್ರವಾಹ, — ಎರಡೂ ಸಂಭವಿಸಿದ್ದು ದುರ್ದೈವದ ಸಂಗತಿ.

### 1. ಬರ ಪರಿಸ್ಥಿತಿ:

ರಾಜ್ಯದ ಬಳ್ಳಾರಿ, ಬೀದರ, ಗುಲ್ಬರ್ಗಾ, ರಾಯಚೂರು,ಬಿಜಾಪುರ ತುಮಕೂರು ಮತ್ತು ಭಾಗಶಃ ಧಾರವಾಡ, ಚಿತ್ರದುರ್ಗ, ಬೆಂಗಳೂರು ಗ್ರಾಮಾಂತರ,ಮಂಡ್ಯ, ಮೈಸೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಸಮರ್ಪಕ ಮತ್ತು ಸಕಾಲಿಕವಾಗಿ ಬೀಳದ ಮುಂಗಾರು ಮಳೆಯಿಂದ ಕೃಷಿ ಚಟುವಟಿಕೆಗಳಿಗೆ ಧಕ್ಕೆಒದಗಿತು. ಬರ ಪರಿಸ್ಥಿತಿಯ ಸ್ಥೂಲ ಚಿತ್ರಣ ಕೆಳಗಿನಂತಿದೆ.

| | | |
|---|---|---|
| 1. | ಬಾಧಿತ ಜನಸಂಖ್ಯೆ | — 59.55 ಲಕ್ಷಗಳು |
| 2. | ಬಾಧಿತ ಕೃಷಿ ಕಾರ್ಮಿಕರು | — 11.05 ಲಕ್ಷಗಳು |
| 3. | ತೊಂದರೆಗೊಳಗಾದ ಸಣ್ಣ ರೈತರು | — 3.96 ಲಕ್ಷಗಳು |
| 4. | ತೊಂದರೆಗೊಳಗಾದ ಮಧ್ಯಮರೈತರು | — 3.79 ಲಕ್ಷಗಳು |
| 5. | ಬಾಧಿತ ಜಾನುವಾರು | — 22.64 ಲಕ್ಷಗಳು |
| 6. | ತೊಂದರೆಗೊಳಗಾದ ತಾಲ್ಲೂಕುಗಳು | — 72 |
| 7. | ಬಾಧಿತ ಗ್ರಾಮಗಳು | — 6571 |
| | | (ಲಕ್ಷ ಹೆಕ್ಟೇರಗಳಲ್ಲಿ) |
| 8. | ಸಾಮಾನ್ಯ ಕ್ಷೇತ್ರ | — 43.28 |
| 9. | ಬಿತ್ತನೆ ಕ್ಷೇತ್ರ | — 24.76 |
| 10. | ಬಾಧಿತ ಕ್ಷೇತ್ರ : | |
| | ಹಾಳಾದ ಬಿತ್ತನೆ ಕ್ಷೇತ್ರ 8.68 | |
| | ಬಿತ್ತದಿರುವ ಕ್ಷೇತ್ರ 18.52 | 27.20 |

ತೊಂದರೆಗೊಳಗಾದ ಜನರ ಸಂಕಷ್ಟವನ್ನು ಶಮನಗೊಳಿಸಲು ರಾಜ್ಯ ಸರ್ಕಾರವು ಶೀಘ್ರಗತಿಯಲ್ಲಿ ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ರೂ.10.28 ಕೋಟಿಗಳನ್ನು ಪ್ರಸ್ತುತ 1993–94ರಲ್ಲಿ ಬಿಡುಗಡೆ ಮಾಡಿದೆ ಹಾಗೂ ರೂ.27.00 ಲಕ್ಷಗಳನ್ನು ಜಾನುವಾರುಗಳಿಗೆ ಮೇವು ಒದಗಿಸಲು ಬಿಡುಗಡೆ ಮಾಡಿದೆ.

—4—

2. ಭಾರಿ ಮಳೆ : ಪ್ರವಾಹ:

(ಅ) ಹಾನಿಯ ವಿವರಗಳು:

1994ರಲ್ಲಿ ಮುಂಗಾರು ಸಕಾಲಿಕವಾಗಿ ಆರಂಭವಾಯಿತಾದರೂ, ಅದು ಸಮರ್ಪಕವಾಗಿರಲಿಲ್ಲ. ಪಶ್ಚಿಮ ಘಟ್ಟಗಳು ಮತ್ತು ಕರಾವಳಿ ಜಿಲ್ಲೆಗಳಲ್ಲಿ ತೀವ್ರವಾಗಿದ್ದ ಮುಂಗಾರು ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ತೀವ್ರ ಕಡಿಮೆಯಾಗಿತ್ತು. ಮುಂಗಾರು ಮಳೆಯಿಂದಾದ ಹಾನಿಯ ಸ್ಥೂಲ ಚಿತ್ರ ಹೀಗಿದೆ —

| | | |
|---|---|---|
| (1) ತೊಂದರೆಗೊಳಗಾದ ಜಿಲ್ಲೆಗಳ ಸಂಖ್ಯೆ | — | 16 |
| (2) ತೊಂದರೆಗೊಳಗಾದ ತಾಲ್ಲೂಕುಗಳು | — | 94 |
| (3) ಬಾಧಿತ ಗ್ರಾಮಗಳು | — | 4847 |
| (4) ಬಾಧಿತ ಜನಸಂಖ್ಯೆ | — | 18.02 ಲಕ್ಷಗಳು |
| (5) ಮೃತಪಟ್ಟವರು | — | 71 |
| (6) ಗಾಯಾಳುಗಳು | — | 92 |
| (7) ಜಾನುವಾರು ಹಾನಿ | — | 2768 |
| (8) ಮನೆ ಕುಸಿತ — ಪೂರ್ಣ — 4124; ಭಾಗಶಃ — 37874 | — | 41998 |
| (9) ಹಾನಿಗೊಂಡ ನೀರಾವರಿ ಪಂಪಸೆಟ್ಟುಗಳು | — | 2695 |
| (10) ಹಾನಿಗೊಂಡ ನೀರಾವರಿ ಬಾವಿಗಳು | — | 124 |
| (11) ಬಾಧಿತ ಕೃಷಿ ಕ್ಷೇತ್ರ | — | 1.57 ಲಕ್ಷ ಹೆಕ್ಟೇರುಗಳು |

(ಆ) ಒಟ್ಟು ಖಾಸಗಿ ಆಸ್ತಿಗಳಿಗಾದ ಅಂದಾಜು ಹಾನಿ — 78.95 ಕೋಟಿಗಳು

| | | |
|---|---|---|
| (1) ಹಾನಿಗೊಂಡ ಕಟ್ಟಡಗಳು | — | 2466 |
| (2) ಹಾನಿಗೊಂಡ ಸೇತುವೆಗಳು | — | 1027 |
| (3) ಹಾನಿಗೊಂಡ ರಸ್ತೆಗಳು | — | 2243 ಕಿ.ಮಿ. ಮತ್ತು ತುಂಡುಗಳು |
| (4) ಹಾನಿಗೊಂಡ ಸಣ್ಣ ನೀರಾವರಿ ಕೆರೆಗಳು | — | 1535 |
| (5) ಹಾನಿಗೊಂಡ ನೀರಾವರಿ ಕಾಲುವೆಗಳು | — | 161 |

(ಇ) ಒಟ್ಟು ಸಾರ್ವಜನಿಕ ಆಸ್ತಿಗಳ ಅಂದಾಜು ಹಾನಿ — 87.51 ಕೋಟಿಗಳು

ಒಟ್ಟಾರೆ ಮುಂಗಾರು ಮಳೆಯಿಂದಾದ ಹಾನಿ ರೂ.166.46 ಕೋಟಿಗಳು

(ಆ) ರಕ್ಷಣಾ ಕಾರ್ಯದ ವಿವರಗಳು:

ರಾಜ್ಯ ಸರ್ಕಾರವು ತಕ್ಷಣ ದೋಣಿಗಳನ್ನು ಬಳಸಿ ರಕ್ಷಣಾ ಕಾರ್ಯ ಕೈಗೊಂಡಿತಲ್ಲದೇ, ಗಂಜಿ ಕೇಂದ್ರ : ಪರಿಹಾರ ಕೇಂದ್ರಗಳನ್ನು ತೆರೆದು ಉಚಿತ ಆಹಾರ ಮತ್ತು ವೈದ್ಯಕೀಯ ಸೌಲಭ್ಯವನ್ನು ಒದಗಿಸಿತು. ಸಂತ್ರಸ್ಥರಿಗೆ ಉಚಿತವಾಗಿ ಬಟ್ಟೆ: ಕಂಬಳಿಗಳನ್ನು ಒದಗಿಸಲಾಯಿತು. ರಕ್ಷಣೆ ಮತ್ತು ಪರಿಹಾರ ಕಾರ್ಯಗಳ ವಿವರಗಳು ಹೀಗಿವೆ।

| | | | |
|---|---|---|---|
| 1. ಜಲಾವೃತಗೊಂಡ ಗ್ರಾಮಗಳು | | | — 347 |
| 2. ಬಳಸಲಾದ ದೋಣಿಗಳು : | | | |
| ರಾಜ್ಯ ಕೇಂದ್ರ ಸ್ಥಳದಿಂದ | — 17 | | |
| ಸ್ಥಳೀಯವು | — 83 | | — 100 |
| 3. ತೆರೆಯಲಾದ ಗಂಜಿ ಕೇಂದ್ರ/ಪರಿಹಾರ ಕೇಂದ್ರಗಳು | | | — 175 |
| 4. ಆಶ್ರಿತರ ಸಂಖ್ಯೆ | | | 63814 |
| 5. ಜೂನ್–ಜುಲೈ 1994ರ ಪ್ರವಾಹ ಪರಿಹಾರಕ್ಕೆ ಬಿಡುಗಡೆ ಮಾಡಲಾದ ಹಣ | | ರೂ. | 1250.00 ಲಕ್ಷಗಳು |
| ಅನುದಾನದ ವರ್ಗಾವಣೆಗೆ ಅನುಮೋದಿಸಿದ ಮೊಬಲಗು | | | 270.00 ಲಕ್ಷಗಳು |
| ಒಟ್ಟು : | | ರೂ. | 1520.00 ಲಕ್ಷಗಳು |

ಇದಲ್ಲದೇ ರಾಜ್ಯದ ದಕ್ಷಿಣ ಒಳನಾಡಿನ ಹಾಗೂ ಕರಾವಳಿ : ಪಶ್ಚಿಮಘಟ್ಟಗಳ ಜಿಲ್ಲೆಗಳಲ್ಲಿ ಹಿಂಗಾರು ಮಳೆಯು ತೀವ್ರವಾಗಿತ್ತು. ಇದರಿಂದ 31 ತಾಲ್ಲೂಕುಗಳು ತೊಂದರೆಗೊಳಗಾಗಿ, 32 ಮಂದಿ ಮೃತಪಟ್ಟು, 10 ಮಂದಿ ಗಾಯಗೊಂಡಿರುತ್ತಾರೆ. 167 ಮನೆಗಳು ಪೂರ್ಣವಾಗಿ, 2182 ಮನೆಗಳು ಭಾಗಶ: ಹಾನಿಗೊಂಡಿರುತ್ತವೆ. ಒಟ್ಟಾರೆ ಹಾನಿ ರೂ. 137.26 ಲಕ್ಷಗಳೆಂದು ಅಂದಾಜಿಸಲಾಗಿದೆ. ರಾಜ್ಯ ಸರ್ಕಾರವು 1.05 ಕೋಟಿಗಳನ್ನು ಹಿಂಗಾರು ಮಳೆ : ಪ್ರವಾಹ ಪರಿಹಾರ ಕಾರ್ಯಗಳಿಗೆಂದು ಬಿಡುಗಡೆ ಮಾಡಿದೆ.

3. <u>ಆಕಸ್ಮಿಕ ಅಗ್ನಿ ಅನಾಹುತ:</u>

ದಿನಾಂಕ 4ನೇ ಮಾರ್ಚ್, 1994ರಂದು ಬೆಂಗಳೂರಿನ ಗಂಗೊಂಡನಹಳ್ಳಿ(ಚಂದ್ರ ಲೇಔಟ್) ನಲ್ಲಿ ಮತ್ತು ದಿನಾಂಕ 14ನೇ ಮಾರ್ಚ್, 1994ರಂದು ರಾಯಚೂರು ಜಿಲ್ಲೆಯ ಸಿಂಧನೂರಿನ ಪೆಡುಬೂಬ ಕಾಲೋನಿಯಲ್ಲಿ ನಡೆದ ಎರಡು ಪ್ರಮುಖ ಅಗ್ನಿ ದುರಂತಗಳಲ್ಲಿ ಅಂದಾಜು 2000 ರಷ್ಟು ಗುಡಿಸಲುಗಳು ನಾಶಗೊಂಡವು. ತಕ್ಷಣ ಸರ್ಕಾರ ಪುನರವಸತಿ ಕಾರ್ಯಗಳನ್ನು ಹಮ್ಮಿಕೊಂಡಿತು. ರೂ.1.77 ಕೋಟಿಗಳಷ್ಟು ಅನುದಾನವನ್ನು ವಿವಿಧ ಜಿಲ್ಲೆಗಳಿಗೆ ಆಕಸ್ಮಿಕ ಅಗ್ನಿ ಅನಾಹುತ ಪರಿಹಾರ ಕಾರ್ಯಗಳಿಗಾಗಿ ಬಿಡುಗಡೆ ಮಾಡಲಾಗಿದೆ.

ಇದರೊಂದಿಗೆ, ಗ್ರಾಮಾಂತರ ಪ್ರದೇಶಗಳಲ್ಲಿನ, ವಾರ್ಷಿಕ ವರಮಾನ 7200.00 ರೂ ಕ್ಕಿಂತಲೂ ಕಡಿಮೆ ಇರುವ ಬಡ ಕುಟುಂಬಗಳಿಗೆ ಉಪಯೋಗವಾಗುವ ಗುಡಿಸಲು ವಿಮಾ ಯೋಜನೆಯನ್ನು ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಗುಡಿಸಲು ಅಥವಾ ಗುಡಿಸಲೊಳಗಿರುವ ವಸ್ತುಗಳ ಆಕಸ್ಮಿಕ ಬೆಂಕಿಯಿಂದ ಸುಟ್ಟುಹೋದಾಗ, ರೂ.1000.00 ಮತ್ತು ರೂ. 500.00 ಗಳ ಪರಿಹಾರವನ್ನು ನೊಂದ ಸಂತ್ರಸ್ಥರ ಕುಟುಂಬಕ್ಕೆ ನೀಡಲಾಗುವುದು.

4. <u>ಪರಿಹಾರ ಕಾರ್ಯಗಳಿಗೆ ಮಾಡಿರುವ ವೆಚ್ಚ:</u>

ದಿನಾಂಕ 1-4-1994 ರಿಂದ 3-1-1995ರವರೆಗೆ ಪ್ರಸ್ತುತ ವರ್ಷದಲ್ಲಿ ನೈಸರ್ಗಿಕ ವಿಕೋಪ ಪರಿಹಾರ ಕಾರ್ಯಗಳಿಗಾಗಿ ಕೆಳಕಂಡಂತೆ ಅನುದಾನವನ್ನು ಒದಗಿಸಿದೆ.

| | | |
|---|---|---|
| | | ( ರೂ. ಕೋಟಿಗಳಲ್ಲಿ) |
| 1) ಆಕಸ್ಮಿಕ ಅಗ್ನಿ ದುರಂತಕ್ಕೆ ಪರಿಹಾರ | — | 1.77 |
| 2) ಬರ ಪರಿಹಾರ ಕಾರ್ಯಗಳಿಗೆ | — | 10.55 |
| 3) ಪ್ರವಾಹ ಪರಿಹಾರ ಕಾರ್ಯಗಳಿಗೆ | — | 16.24 |
| 4) ಭೂಕಂಪ ಪರಿಹಾರ ಕಾರ್ಯಗಳಿಗೆ | — | 1.50 |
| 5) ಪ್ಲೇಗ್ ರೋಗದ ವಿರುದ್ಧ ಮುನ್ನೆಚ್ಚರಿಕೆಗೆ | — | 0.38 |
| ಒಟ್ಟು : | | 30.44 |

ರೂ. 1.00 ಕೋಟಿಗಳವರೆಗೆ ಪ್ರಕೃತಿ ವಿಕೋಪ ಪರಿಹಾರ ಕಾರ್ಯಗಳಿಗೆ ಉಪಯೋಗಿಸಲು ಜಿಲ್ಲಾಧಿಕಾರಿಗಳಿಗೆ ಸರ್ಕಾರಿ ಆದೇಶ ಸಂಖ್ಯೆ :ಆರ್‌ಡಿ 404 ಟಿಎನ್‌ಆರ್ 94, ದಿನಾಂಕ 31ನೇ ಆಗಸ್ಟ್ 1994ರಲ್ಲಿ ಸರ್ಕಾರವು ಹೆಚ್ಚಿನ ಆರ್ಥಿಕ ಅಧಿಕಾರವನ್ನು ನೀಡಿದೆ.

## 4. ಭೂ ಮಂಜೂರಾತಿ

ವ್ಯವಸಾಯಕ್ಕೆ ಸೂಕ್ತವಾದ ಸರ್ಕಾರಿ ಜಮೀನನ್ನು ಲಭ್ಯವಿರುವ ಪಟ್ಟಿಗೆ ತೆಗೆದುಕೊಂಡು 1969ರ ಕರ್ನಾಟಕ ಭೂ ಮಂಜೂರಾತಿ ನಿಯಮಗಳ ಅಡಿಯಲ್ಲಿ ಅರ್ಹ ವ್ಯಕ್ತಿಗಳಿಗೆ ಸರ್ಕಾರಿ ಜಮೀನನ್ನು ವಿಲೇ ಮಾಡಲು ಅವಕಾಶವಿರುತ್ತದೆ. ಆದರೆ ಅನಧಿಕೃತ ಒತ್ತುವರಿಯಿಂದಾಗಿ ಕರ್ನಾಟಕ ಭೂ ಮಂಜೂರಾತಿಯ ಕಾಯಿದೆ ಪ್ರಕಾರ ಸರ್ಕಾರಿ ಜಮೀನು ವಿಲೇ ಮಾಡಲು ಈಗ ಲಭ್ಯವಿಲ್ಲವಾಗಿದೆ.

2. 1991ರಲ್ಲಿ ಸರ್ಕಾರಿ ಜಮೀನನ್ನು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವುದನ್ನು ಸಕ್ರಮೀಕರಿಸಲು ಕಾಯಿದೆಯನ್ನು ಸೂಕ್ತವಾಗಿ ತಿದ್ದುಪಡಿ ಮಾಡಿ 1964 ರ ಕರ್ನಾಟಕ ಭೂ ಕಂದಾಯ ಕಾಯಿದೆ ಕಲಂ 94 ಎ ಯನ್ನು ವ್ಯವಸ್ಥೆಮಾಡಲಾಗಿರುತ್ತದೆ. ಅನಧಿಕೃತ ಸಾಗುವಳಿ ಮಾಡುತ್ತಿರುವ ಸರ್ಕಾರಿ ಜಮೀನನ್ನು ಸಕ್ರಮೀಕರಿಸುವ ಯೋಜನೆಯಲ್ಲಿ ಐದು ಸದಸ್ಯರ ತಾಲ್ಲೂಕು ಸಮಿತಿಯಿದ್ದು, ಸ್ಥಳೀಯ ವಿಧಾನ ಸಭಾ ಸದಸ್ಯರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಗರಿಷ್ಠ 2 ಹೆಕ್ಟೇರು ಜಮೀನನ್ನು ಅರ್ಹವಿರುವ ಅನಧಿಕೃತ ಸಾಗುವಳಿದಾರರಿಗೆ ಮಂಜೂರು ಮಾಡಲು ಅಧಿಕಾರವಿರುತ್ತವೆ. ಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಲಾದ ಜಮೀನನ್ನು ಮಂಜೂರು ಮಾಡಲು ಬರುವುದಿಲ್ಲವಾಗಿರುತ್ತದೆ. ಸಂಬಂಧಪಟ್ಟ ತಾಲ್ಲೂಕು ತಹಶೀಲ್ದಾರರು ಸಮಿತಿಗೆ ಸದಸ್ಯ–ಕಾರ್ಯದರ್ಶಿಗಳಾಗಿರುತ್ತಾರೆ. ಸಮಿತಿಯ ಆದೇಶದ ವಿರುದ್ಧ ಅಪೀಲು ಸಂಬಂಧಿಸಿದ ಉಪ ವಿಭಾಗಾಧಿಕಾರಿಗಳ ವ್ಯಾಪ್ತಿಗೆ ಬರುತ್ತದೆ.

3. ಅನಧಿಕೃತ ಸಾಗುವಳಿಯನ್ನು ಸಕ್ರಮೀಕರಿಸಲು ಅರ್ಜಿಯನ್ನು ಸಲ್ಲಿಸಲು 6 ತಿಂಗಳ ಅವಧಿಯನ್ನು ನೀಡಲಾಗಿತ್ತು. ಕೊನೆಯ ದಿನಾಂಕ 19-9-1991 ರಲ್ಲಿ 25,80,214 ಎಕರೆ ಜಮೀನನ್ನು ಸಕ್ರಮೀಕರಿಸಲು 10,86,826 ಅರ್ಜಿಗಳನ್ನು ಸ್ವೀಕರಿಸಲಾಗಿತ್ತು. ದಿನಾಂಕ 31–10–94ರವರೆಗೆ 3,85,303 ಎಕರೆ ಸರ್ಕಾರಿ ಜಮೀನಿಗೆ ಸಂಬಂಧಿಸಿದ 2,28,880 ವ್ಯಕ್ತಿಗಳಿಗೆ ಮಂಜೂರು ಮಾಡಲಾಗಿರುತ್ತದೆ. ಈ ಪೈಕಿ

1,51,736 ಎಕರೆ ಜಮೀನನ್ನು 80,339 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವ್ಯಕ್ತಿಗಳಿಗೆ ಮಂಜೂರು ಮಾಡಲಾಗಿರುತ್ತದೆ. ಇದುವರೆವಿಗೂ ಒಟ್ಟು ವಿಲೇವಾರಿಯಾಗಿರುವ : ಬಾಕಿ ಇರುವ ಅರ್ಜಿಗಳು :

| | ಅರ್ಜಿಗಳು | ವಿಸ್ತೀರ್ಣ |
|---|---|---|
| ಅ) ಸ್ವೀಕೃತಿಯಾದ ಅರ್ಜಿಗಳು | 10,86,826 | 25,80,214 |
| ಆ) ವಿಲೇವಾರಿ: ಮಂಜೂರಾತಿಯಾದದ್ದು | 2,28,880 | 3,85,303 |
| ತಿರಸ್ಕೃತವಾದದ್ದು | 3,96,545 | 9,86,964 |
| ಇ) ಒಟ್ಟು ವಿಲೇವಾರಿ | 6,25,425 | 13,72,267 |
| ಈ) ಒಟ್ಟು ಬಾಕಿ ಇರುವ ಅರ್ಜಿಗಳು | 4,61,401 | 12,07,947 |

ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ, ಅಧಿಕಾರೇತರ ಸದಸ್ಯರನ್ನೊಳಗೊಂಡಂತೆ ತಾಲ್ಲೂಕು ಮಟ್ಟದ ಸಮಿತಿಗಳನ್ನು ಪುನರ ರಚಿಸುವ ಬಗ್ಗೆ ಅಗತ್ಯ ತಿದ್ದುಪಡಿಗಳನ್ನು ತರಲು ಉದ್ದೇಶಿಸಲಾಗಿದೆ. ಬಾಕಿ ಇರುವ ಪ್ರಕರಣಗಳನ್ನು ದಿ. 31-3-1996ರೊಳಗೆ ಇತ್ಯರ್ಥಗೊಳಿಸಲಾಗುವುದು.

## 5. ಭೂ ಸುಧಾರಣೆ

ಭೂ ಸುಧಾರಣೆ ಕಾಯ್ದೆಗಳನ್ನು ಅನುಷ್ಠಾನಗೊಳಿಸುವಲ್ಲಿ ಗ್ರಾಮಾಂತರ ಬಡ ಜನತೆಗೆ ಸಹಾಯ ಮಾಡುವಲ್ಲಿ ಭಾರತದ ಇತರ ಅಗ್ರ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ.

ಸರ್ಕಾರವು ಭೂ ಸುಧಾರಣೆ ಮೂಲಕ ಗ್ರಾಮಾಂತರ ಬಡ ಜನತೆಯ ಜೀವನವನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬದಲಾವಣೆ ಮಾಡಲು ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿದ ಕೆಲವು ಸಾಧನೆಗಳನ್ನು ಈ ಟಿಪ್ಪಣಿಯಲ್ಲಿನ ಕೆಳಗಿನವುಗಳು ಮುಖ್ಯವಾದವುಗಳು.

(1) ಹೆಚ್ಚುವರಿ ಭೂಮಿಯ ಹಂಚಿಕೆ::

ಸರ್ಕಾರದಲ್ಲಿ ನಿಹಿತಗೊಳಿಸಿಕೊಂಡ ಹೆಚ್ಚುವರಿ ಭೂಮಿಯನ್ನು ಕರ್ನಾಟಕ ಭೂ ಸುಧಾರಣೆ ಕಾಯ್ದೆಯಡಿಯಲ್ಲಿ ವಿತರಿಸುತ್ತದೆ. ಈ ವಿತರಣೆಯು ಪರಿಶಿಷ್ಟ ಜಾತಿ:ಪಂಗಡದವರಿಗೆ ಶೇಕಡ 50 ಮೀಸಲಾತಿಯಲ್ಲಿರುತ್ತದೆ. ಈ ಮೀಸಲಾತಿಯನ್ನು ದಿನಾಂಕ: 21-4-92 ರಿಂದ ಶೇಕಡ 75ಕ್ಕೆ ಏರಿಸಲಾಗಿದೆ.

ಒಟ್ಟಾರೆ ವಶಪಡಿಸಿಕೊಂಡ ಹೆಚ್ಚುವರಿ ಭೂಮಿಯಲ್ಲಿ 1,16,510 ಎಕರೆ ವಿಸ್ತೀರ್ಣದ ಜಮೀನನ್ನು ನಿರ್ಗತಿಕ ಭೂಹೀನ ಕಾರ್ಮಿಕರಿಗೆ ಮತ್ತು ಇತರೆ ಅರ್ಹ ವ್ಯಕ್ತಿಗಳಿಗೆ ರಾಜ್ಯದಲ್ಲಿ ವಿತರಣೆ ಮಾಡಲಾಗಿದೆ. 74,385 ಎಕರೆ ಜಮೀನನ್ನು 19,991 ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನರಿಗೆ 13,991 ಎಕರೆ ಭೂಮಿಯನ್ನು ಅರಣ್ಯ ಮತ್ತು ಇತರೆ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿದೆ.

(2) ಗೇಣಿ ಅರ್ಜಿಗಳ ವಿಲೇವಾರಿ ವೇಳೆ ತೆಗೆದುಕೊಂಡ ಕ್ರಮ:

ಗೇಣಿ ಅರ್ಜಿಗಳು ಪ್ರತಿಯೊಬ್ಬ ಗೇಣಿದಾರರು ದಿನಾಂಕ 1-3-74ರ ಅರ್ಹತೆಯಂತೆ ನಮೂನೆ-7ರಲ್ಲಿ ಭೂ ನ್ಯಾಯ ಮಂಡಳಿ ಮುಂದೆ ಅರ್ಜಿ ಸಲ್ಲಿಸಲು ಅವಕಾಶ

ನೀಡಿದೆ. ಈ ನಿಗಧಿತ ಅವಧಿಯನ್ನು ಕಾಲಕಾಲಕ್ಕೆ ವಿಸ್ತರಿಸುತ್ತಿದ್ದು ದಿನಾಂಕ 30–6–79ಕ್ಕೆ ಕೊನೆಗೊಳಿಸಲಾಗಿದ್ದು ಈಗಾಗಲೇ ಹೆಚ್ಚಿನ ಪ್ರಕರಣಗಳನ್ನು ವಿಲೆ ಮಾಡಲಾಗಿದೆ. ಭೂ ಸುಧಾರಣೆ ಕಾಯ್ದೆ 48ಎ ಪ್ರಕಾರ 8,18,93 ಅರ್ಜಿಗಳು ಸ್ವೀಕೃತವಾಗಿದ್ದು 20,00,284 ಎಕರೆ ವಿಸ್ತೀರ್ಣದ ಜಮೀನನ್ನು ಗೇಣಿದಾರರ ಪರವಾಗಿ ವಿಲೆ ಮಾಡಲಾಗಿದೆ. ಗೇಣಿದಾರರಿಂದಾಗಲೀ ಅಥವಾ ವ್ಯವಸಾಯ ಭೂಮಿ ಎಂದಾಗಲೀ ಘೋಷಿಸುವುದಕ್ಕೆ ಭೂ ನ್ಯಾಯ ಮಂಡಳಿಗೆ ಅಧಿಕಾರವಿದೆಯೇ ಹೊರತು ಬೇರೆ ಯಾವ ನ್ಯಾಯ ಮಂಡಳಿಗಳಿಗೂ ಇರುವುದಿಲ್ಲ. ಗೇಣಿದಾರರ ರಕ್ಷಣೆಯ ಸಲುವಾಗಿ ರಿಸೀವರ ನೇಮಕಮಾಡುವುದು ಮಧ್ಯಂತರ ತಡೆ ಆಜ್ಞೆ ನೀಡುವುದು ಭೂ ನ್ಯಾಯ ಮಂಡಳಿ ಮಾತ್ರ ಅಧಿಕಾರ ಹೊಂದಿರುತ್ತದೆ.

(ಆ) <u>ವಿಮಾ ಕಂತಿನ ಮೊತ್ತ:</u>

ಕರ್ನಾಟಕ ಭೂ ಸುಧಾರಣೆ ಕಾಯ್ದೆ 48 ಎ(7)ರಲ್ಲಿ ನಿಗಧಿಗೊಳಿಸಿರುವಂತೆ ಗೇಣಿದಾರನೆಂದು ನೋಂದಾಯಿತ ಪ್ರತಿಯೊಬ್ಬರೂ ವಿಮಾ ಕಂತನ್ನು ಪಾವತಿಸುವುದು. ಆ ಪ್ರಕಾರ ಅವರು ವಾರ್ಷಿಕ ಆದಾಯದ 20 ಪಟ್ಟನ್ನು 'ಡಿ' ಶ್ರೇಣಿ ಭೂಮಿಗೆ (ಖುಷ್ಕಿ ಭೂಮಿ) ಅನ್ವಯವಾಗುವಂತೆ ಪಾವತಿಸಬೇಕು ಮತ್ತು 15 ಪಟ್ಟು ವಾರ್ಷಿಕ ಆದಾಯವೆಂದರೆ ಕರ್ನಾಟಕ ಭೂ ಸುಧಾರಣೆ ಕಾಯ್ದೆ ಕಲಂ 8 ರಂತೆ ಪಾವತಿಸಬೇಕಾದ ವಾರ್ಷಿಕ ಬಾಡಿಗೆ ಆಗಿರುತ್ತದೆ. ನಾಲ್ಕು ಎಕರೆ ಖುಷ್ಕಿ ಜಮೀನನ್ನು ಹೊಂದಿದ ಗೇಣಿದಾರನು ಎಕರೆ ಒಂದಕ್ಕೆ ರೂ 20 ರಂತೆ ರೂ.1600 ಪ್ರೀಮಿಯಂ ಕಟ್ಟಬೇಕಾಗುತ್ತದೆ. ಒಂದು ವೇಳೆ ಪ್ರೀಮಿಯಂ ಮೊತ್ತವು 2000–00ನ್ನು ದಾಟಿದರೆ ಆ ಮೊತ್ತವನ್ನು 20 ಕಂತುಗಳಲ್ಲಿ ಕಟ್ಟಬಹುದಾಗಿರುತ್ತದೆ. ಉಳುವವರ ಹಿತಾಸಕ್ತಿಯನ್ನು ಕಾಯುವುದೇ ನಮ್ಮ ಮುಖ್ಯ ಉದ್ದೇಶ ಆದರೂ ಹಿಂದಿನ ಭೂ ಮಾಲೀಕರ ನ್ಯಾಯಯುತ ಹಿತಾಸಕ್ತಿಯನ್ನು ಕಡೆಗಣಿಸುವುದಿಲ್ಲ. ಈ ಭೂ ಮಾಲೀಕರಿಗೆ ಪರಿಹಾರ ನೀಡುವುದು ಸ್ವಯಂ ವೇದ್ಯವಾಗಿರುತ್ತದೆ. ಈಗಾಗಲೇ ಗಣನೀಯ ಪ್ರಮಾಣದ ಪರಿಹಾರಧನ ಪಾವತಿಸಲಾಗಿದೆ.

ತಿದ್ದುಪಡಿಯಾದ ಭೂ ಸುಧಾರಣೆ ಕಾಯ್ದೆಯಂತೆ 10 ಎಕರೆ ಖುಷ್ಕಿ ಜಮೀನು (ಡಿ ಶ್ರೇಣಿ) ಹೊಂದಿದ ಅದಕ್ಕೆ ತತ್ಸಮಾನವಾದ ಯಾವುದೇ ಶ್ರೇಣಿ ಭೂಮಿ ಹೊಂದಿರುವ ಗೇಣಿದಾರರಿಗೆ ಪ್ರೀಮಿಯಂನ್ನು ಮನ್ನಾ ಮಾಡಿರುತ್ತದೆ. ಈ ರೀತಿ 2,75,818 ಗೇಣಿದಾರರು, ರೂ. 22.92 ಕೋಟಿಗಳ ಅನುಕೂಲ ಪಡೆದಿರುತ್ತಾರೆ. ಮತ್ತು ಇದರಲ್ಲಿ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಗೇಣಿದಾರರು ಮಾಡಿದ ಸಾಲವೂ ಸೇರಿರುತ್ತದೆ.

3) <u>ಬಾಕಿ ಇರುವ ನ್ಯಾಯಾಲಯ ಪ್ರಕರಣಗಳ ವಿಲೇವಾರಿಗೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಧಿಕರಣ ರಚನೆ:</u>

ದಿನಾಂಕ 14–3–92 ರಂದು ನವದೆಹಲಿಯಲ್ಲಿ ನಡೆದ ಕಂದಾಯ ಮಂತ್ರಿಗಳ ಸಮ್ಮೇಳನದ ಶಿಫಾರಸ್ಸಿನಂತೆ ಪ್ರತಿಯೊಂದು ರಾಜ್ಯವು ಭೂ ನಿಗಧಿ ಪ್ರಕರಣ ಮತ್ತು ಇತರ ಕಂದಾಯ ಹಾಗೂ ಭೂ ಸುಧಾರಣಾ ವಿಷಯಗಳನ್ನು ತೀರ್ಮಾನಿಸಲು ಸಂವಿಧಾನ

ಸಂಹಿತೆ 323–ಬಿ ಪ್ರಕಾರ ವಿಶೇಷ ನ್ಯಾಯಾಧಿಕರಣ ಸ್ಥಾಪಿಸಲು ಉದ್ದೇಶಿಸಲಾಯಿತು. ದಿನಾಂಕ 9–10–92ರಲ್ಲಿ ಮತ್ತು ಹೊಸದೆಹಲಿಯಲ್ಲಿ ನಡೆದ ಸಮ್ಮೇಳನದಲ್ಲಿ ಕೇಂದ್ರ ಸರ್ಕಾರವು ಸಂವಿಧಾನ ಸಂಹಿತೆ 323–ಬಿ ರಂತೆ ಭೂ ನ್ಯಾಯ ಮಂಡಳಿಯನ್ನು ಸ್ಥಾಪಿಸಲು ಇತರೆ ರಾಜ್ಯಗಳಲ್ಲಿರುವಂತೆ ಉದಾಹರಣೆಗೆ ಬಿಹಾರ, ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ, ಭೂ ಸುಧಾರಣೆ ಪ್ರಕರಣಗಳನ್ನು ಇತ್ಯರ್ಥ ಮಾಡಲು ಕೇಂದ್ರ ಸರ್ಕಾರವು ಸಲಹೆ ಮಾಡಿತು. ಅದೇ ರೀತಿಯಾಗಿ ಪ್ರಥಮ ಧ್ಯೇಯವಾಗಿ ನ್ಯಾಯಾಲಯ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥ ಮಾಡಲು ನ್ಯಾಯಾಧಿಕರಣಗಳನ್ನು ಸ್ಥಾಪಿಸುವಂತೆಯೂ ಇವುಗಳು ಉಚ್ಚ ನ್ಯಾಯಾಲಯವನ್ನು ಹೊರತುಪಡಿಸಿ ಸರ್ವೋಚ್ಚ ನ್ಯಾಯಾಲಯದಲ್ಲಿ ಮಾತ್ರ ಅಪೀಲನ್ನು ಸಲ್ಲಿಸುವಂತಾಗಿದೆ. ಈ ದಿಶೆಯಲ್ಲಿ ಸಚಿವ ಸಂಪುಟದ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಉಪ ಸಮಿತಿ ರಚಿಸಿದ್ದು ವಿಶೇಷ ನ್ಯಾಯಾಧಿಕರಣಕ್ಕೆ ಸಂಬಂಧಿಸಿದಂತೆ ವರದಿ ನೀಡಿದ್ದು ಈ ರೀತಿಯಾಗಿ ಬಿಲ್ಲು ತಯಾರು ಮಾಡಿ ಅದನ್ನು ಶಾಸನ ಸಭೆಯ ಮುಂದಿಡಲಾಗಿತ್ತು. ಕರ್ನಾಟಕ ಶ್ರೇಷ್ಠ ನ್ಯಾಯಾಧಿಕರಣ ಬಿಲ್ಲನ್ನು ಶಾಸನ ಸಭೆಯು ಈ ಬಗ್ಗೆ ನಿಯಮಗಳನ್ನು ಮಾಡಲಾಗುತ್ತಿದ್ದು ನಾಲ್ಕು ವಿಭಾಗಗಳ ಕೇಂದ್ರ ಸ್ಥಳಗಳಾದ ಬೆಂಗಳೂರು, ಬೆಳಗಾಂ, ಗುಲ್ಬರ್ಗಾ, ಮತ್ತು ಮೈಸೂರುಗಳಲ್ಲಿ ವಿಶೇಷ ನ್ಯಾಯಾಧಿಕರಣಗಳನ್ನು ಶೀಘ್ರದಲ್ಲಿಯೇ ಸ್ಥಾಪಿಸಲಾಗುವುದು. ವಿವಿಧ ಹಂತಗಳಲ್ಲಿ ಬಾಕಿ ಇರುವ ನ್ಯಾಯಾಲಯದ ಅಪೀಲು ಪ್ರಕರಣಗಳನ್ನು ಇತ್ಯರ್ಥ ಮಾಡಲು ಭರವಸೆ ನೀಡಿದೆ.

## 6. ಭೂ ಕಂದಾಯ

### 1) ಬೇಡಿಕೆ, ವಸೂಲಿ ಮತ್ತು ಬಾಕಿ:

ದಿನಾಂಕ 31–12–94ಕ್ಕೆ ಇರುವ ಭೂ ಕಂದಾಯ ಮತ್ತು ಇತರೆ ಬಾಕಿಗಳ ಬೇಡಿಕೆ, ವಸೂಲಾತಿ ಮತ್ತು ಬಾಕಿ ವಿವರಗಳು ಕೆಳಕಂಡಂತೆ ಇರುತ್ತವೆ.

(ರೂ. ಕೋಟಿಗಳಲ್ಲಿ)

| ವಿವರ | ಬೇಡಿಕೆ | ವಸೂಲಾತಿ | ಬಾಕಿ |
|---|---|---|---|
| 1) ಭೂ ಕಂದಾಯ ಮತ್ತು ಕರಗಳು | 13.64 | 1.89 | 11.75 |
| 2) ನೀರು ಕರ ಮತ್ತು ನಿರ್ವಹಣಾ ಕರ | 31.47 | 3.19 | 28.28 |
| 3) ನೀರು ದಂಡ ಕರ | 181.30 | 0.02 | 181.28 |
| 4) ಸಾಲಗಳು | 10.90 | 0.22 | 10.68 |
| 5) ಇತರೆ ಬಾಕಿ | 46.46 | 4.89 | 41.57 |
| ಒಟ್ಟು : | 283.77 | 10.21 | 273.56 |

ಬಾಕಿ ಇರುವ ಮೊತ್ತ ರೂ.273.56 ಕೋಟಿಗಳ ವಸೂಲಾತಿಯು ಪ್ರಗತಿಯಲ್ಲಿರುತ್ತದೆ. 1993-94ನೇ ಸಾಲಿನಲ್ಲಿ ಸರ್ಕಾರವು 6 ಜಿಲ್ಲೆಗಳ ಮತ್ತು 23 ಗ್ರಾಮಗಳಿಗೆ ಸೇರಿದ 4,184 ಗ್ರಾಮಗಳಿಗೆ ಸಂಬಂಧಿಸಿದ ಭೂ ಕಂದಾಯ ಮೊತ್ತ ರೂ. 1,21,85,295ಗಳನ್ನು ಮನ್ನಾ ಮಾಡಲಾಗಿದೆ. ಅಧಿಸೂಚನೆ ಸಂಖ್ಯೆ:ಆರಡಿ 57 ಎಲ್‌ಆರ್‌ಎಂ 93 ದಿನಾಂಕ 12-1-95ರಲ್ಲಿ ಮನ್ನಾ ಮಾಡಲು ಅಳವಡಿಸಿಕೊಂಡಿದ್ದ ಪದ್ಧತಿಯನ್ನು ಸರಳಗೊಳಿಸಿ ತಿದ್ದುಪಡಿ ಮಾಡಲಾಗಿದೆ. ಈ ತಿದ್ದುಪಡಿಯಂತೆ ಬೆಳೆ ಇಳುವರಿ ಶೇಕಡ 25ರ ಒಳಗೆ ಇದ್ದಲ್ಲಿ ಶೇಕಡ 100 ಭೂ ಕಂದಾಯ ಮನ್ನಾ ಮಾಡಲು, ಬೆಳೆ ಇಳುವರಿ ಶೇಕಡ 25 ರಿಂದ 50 ಇದ್ದಲ್ಲಿ ಶೇಕಡ 50ರ ಭೂ ಕಂದಾಯ ಮನ್ನಾ ಮಾಡಲು ಅವಕಾಶ ಕಲ್ಪಿಸಲಾಗಿದೆ.

2. <u>ಭೂ ದಾಖಲೆಗಳ ಇಂದೀಕರಣ:</u>

ಖಾತೆದಾರರುಗಳ ದೃಷ್ಟಿಯಿಂದ ಭೂ ಕಂದಾಯ ದಾಖಲೆಗಳನ್ನು ಇಂದೀಕರಿಸುವಂತೆ ಎಲ್ಲಾ ವಿಭಾಗಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಬಾಕಿ ಇರುವ ಖಾತೆ ಬದಲಾವಣೆಗಳನ್ನು ಮಾಡಲು ಮತ್ತು ಭೂದಾಖಲೆಗಳನ್ನು ಇಂದೀಕರಿಸಲು ಹೋಬಳಿ ಮಟ್ಟದಲ್ಲಿ ವಿಶೇಷ ಆಂದೋಲನಗಳನ್ನು ನಡೆಸಲಾಗುತ್ತದೆ. ಖಾತೆ ಬದಲಾವಣೆ ಮಾಡಲು ನಡೆಯುತ್ತಾ ಇರುವ ಅನಾವಶ್ಯಕ ವಿಳಂಬ ಮತ್ತು ಸಾರ್ವಜನಿಕರಿಗೆ ಈ ದಿಶೆಯಲ್ಲಿ ಆಗುತ್ತಾ ಇರುವ ತೊಂದರೆಗಳನ್ನು ತಪ್ಪಿಸುವ ಸಲುವಾಗಿ ನಿಗದಿತ ಕನಿಷ್ಠ ವೇಳೆಯಲ್ಲಿ ಖಾತೆ ಬದಲಾವಣೆಗಳನ್ನು ಮಾಡುವಂತೆ ನಿಯಮಗಳಿಗೆ ಅಗತ್ಯ ತಿದ್ದುಪಡಿಗಳನ್ನು ತರಲು ಉದ್ದೇಶಿಸಲಾಗಿದೆ.

3. <u>ಜಮಾಬಂದಿ ಪುನರುಜ್ಜೀವನ:</u>

ಹಿಂದಿನ ಪದ್ಧತಿಯ ಜಮಾಬಂದಿಯನ್ನು ಪುನರುಜ್ಜೀವನಗೊಳಿಸಿ ಕ್ರಮ ಕೈಗೊಳ್ಳಲು ಎಲ್ಲಾ ಜಿಲ್ಲಾಧಿಕಾರಿಗಳು, ವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರುಗಳಿಗೆ ನಿರ್ದೇಶನ ನೀಡಲಾಗಿದೆ. ದಿಟ್ಟಂ ಜಮಾಬಂದಿ ಅಧಿಕಾರಿಯಾದ ತಹಶೀಲ್ದಾರರು ಮತ್ತು ಹುಜೂರು ಜಮಾಬಂದಿ ಅಧಿಕಾರಿಯಾದ ಉಪವಿಭಾಗಾಧಿಕಾರಿಗಳು : ಜಿಲ್ಲಾಧಿಕಾರಿಗಳು ಜಮಾಬಂದಿ ಸಮಯದಲ್ಲಿ ಕಡ್ಡಾಯವಾಗಿ ಹಳ್ಳಿಗಳಿಗೆ ಭೇಟಿ ಕೊಟ್ಟು ಗ್ರಾಮಸ್ಥರುಗಳ ಮುಂದೆ ಹೋಬಳಿ ಮಟ್ಟದಲ್ಲಿ ಜಮಾಬಂದಿಯನ್ನು ನಡೆಸುವಂತೆ ಸೂಚಿಸಲಾಗಿದೆ. ಜಮಾಬಂದಿ ನಡೆಸುವಾಗ ಅಧ್ಯಕ್ಷತೆ ಮೇರೆಗೆ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುವುದು.

4. <u>ಕೃಷಿ ಪಾಸು ಪುಸ್ತಕಗಳ ವಿತರಣೆ:</u>

73.82 ಲಕ್ಷ ಭೂ ಮಾಲೀಕರ ಪೈಕಿ ಕೇವಲ 18.91 ಲಕ್ಷ ಭೂ ಮಾಲೀಕರುಗಳಿಗೆ ಕೃಷಿ ಪಾಸು ಪುಸ್ತಕಗಳನ್ನು ಇಲ್ಲಿಯವರೆಗೂ ವಿತರಿಸಲಾಗಿದೆ. ಈ ಪುಸ್ತಕಗಳನ್ನು ಪಡೆಯುವುದರಿಂದ ಸಣ್ಣ ಮತ್ತು ಅತೀ ಸಣ್ಣ ರೈತರುಗಳು ನಾನಾ ಯೋಜನೆಗಳ ಅಡಿ ಪ್ರಯೋಜನ ಪಡೆಯಲು ಅನುವಾಗುವಂತೆ ಹಾಲಿ ಇರುವ ಈ ಪುಸ್ತಕ

ಗಳಿಗೆ ಹೆಚ್ಚಿನಮಾಹಿತಿ ನಮೂದಿಸಲು ಹೆಚ್ಚುವರಿ ಕಾಲಂಗಳನ್ನು ಸೇರಿಸಲು ಉದ್ದೇಶಿಸಲಾಗಿದೆ. ಇದರಿಂದ ಪುಸ್ತಕ ಪಡೆದುಕೊಂಡವರು ದಾಖಲೆಗಳ ಪ್ರತಿಗಾಗಿ ಅಧಿಕಾರಿಗಳ ಮುಂದೆ ಅಲೆಯುವುದು ತಪ್ಪುತ್ತದೆ. 1995–96ನೇ ಸಾಲಿನ ಒಳಗಾಗಿ ಬಾಕಿ ಇರುವ ಪಾಸು ಪುಸ್ತಕಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದೆ.

## 7. ಭೂ ಸ್ವಾಧೀನ

ಭೂ ಸ್ವಾಧೀನ ಕಾಯ್ದೆ 1894 ಕೇಂದ್ರ ಕಾಯ್ದೆಯಾಗಿದ್ದು (ತಿದ್ದುಪಡಿ ಕಾಯ್ದೆ 1984) ಕರ್ನಾಟಕ ರಾಜ್ಯ ಸರ್ಕಾರಕ್ಕೂ ಸಹ ಅನ್ವಯಿಸುತ್ತದೆ. ಈ ಕಾಯ್ದೆ ಮೇರೆಗೆ ಎಲ್ಲಾ ಸಾರ್ವಜನಿಕ ಉದ್ದೇಶಗಳಿಗೆ ಭೂ ಸ್ವಾಧೀನ ಪಡಿಸಿಕೊಳ್ಳಲಾಗುತ್ತದೆ. ಪ್ರಸ್ತುತದಲ್ಲಿ ಈ ಕೆಳಕಂಡ ಪ್ರಮುಖ ಯೋಜನೆಗಳಿಗೆ ಸಂಬಂಧಿಸಿದಂತೆ ದೊಡ್ಡ ಪ್ರಮಾಣದಲ್ಲಿ ಭೂ ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ.

1) ಕೊಂಕಣ ರೈಲ್ವೆ
2) ಮಂಗಳೂರು ಸೂಪರ ಥರ್ಮಲ ಪವರ ಪ್ರಾಜೆಕ್ಟ
3) ಸೀಬರ್ಡ ಯೋಜನೆ
4) ಕೃಷ್ಣಾ ಮೇಲ್ದಂಡೆ ಯೋಜನೆ
5) ಎಲೆಕ್ಟ್ರಾನಿಕ ವಾರ ಫೇರ ರೇಂಜ

1) <u>ಕೊಂಕಣ ರೈಲ್ವೆ:</u>

ಇದೊಂದು ಮುಖ್ಯವಾದ ಮತ್ತು ಪ್ರತಿಷ್ಠೆಯ ರಾಷ್ಟ್ರೀಯ ಯೋಜನೆಯಾಗಿರುತ್ತದೆ. ಕೊಂಕಣ ರೈಲ್ವೆಗಾಗಿ ದಕ್ಷಿಣ ಕನ್ನಡದಲ್ಲಿ ಭೂ ಸ್ವಾಧೀನವು ಬಹುಷ್ಟು ಮುಗಿದಿದ್ದು ಮತ್ತು ಉತ್ತರ ಕನ್ನಡದಲ್ಲಿ ಸಂಪೂರ್ಣವಾಗುವ ಹಂತದಲ್ಲಿರುತ್ತದೆ. ಹೀಗಿದ್ದರು ಸರ್ಕಾರವು ರೈಲ್ವೆ ಪ್ರಾಧಿಕಾರಕ್ಕೆ ಜಮೀನಿನ ಸ್ವಾಧೀನವನ್ನು ಮುಂಗಡವಾಗಿ ವಹಿಸಿ ಕೊಟ್ಟಿರುತ್ತದೆ.

2) <u>ಮಂಗಳೂರು ಸೂಪರ ಥರ್ಮಲ ಪವರ ಪ್ರಾಜೆಕ್ಟ:</u>

ಈ ಯೋಜನೆಗೆ ತುರ್ತು ನಿಯಮದಡಿಯಲ್ಲಿ ಭೂ ಸ್ವಾಧೀನ ಕಾರ್ಯವನ್ನು ಮುಗಿಸಿರುತ್ತದೆ. ಈ ಯೋಜನೆಯು ಕಾರ್ಯಗತಗೊಂಡಾಗ ನಮ್ಮ ರಾಜ್ಯದಲ್ಲಿ ಇಂಧನ ಕ್ಷಮತೆಯು ಹೆಚ್ಚಾಗುತ್ತದೆ.

3) <u>ಸೀಬರ್ಡ ಯೋಜನೆ:</u>

ಇದು ಮೂರನೆಯ ಅತಿ ದೊಡ್ಡ ನೌಕಾ ನೆಲೆಯಾಗಿದೆ. ಭೂ ಸ್ವಾಧೀನ ಕಾರ್ಯ ಮುಗಿದಿರುತ್ತದೆ. ಪುನರ್ವಸತಿ ಕಾರ್ಯ ಅಭಿವೃದ್ಧಿಯಲ್ಲಿದೆ.

4) <u>ಕೃಷ್ಣಾ ಮೇಲ್ದಂಡೆ ಯೋಜನೆ:</u>

ಈ ಯೋಜನೆಯು ವಿಶ್ವ ಬ್ಯಾಂಕ್ ನೆರವಿನಿಂದ ನಿರ್ಮಿಸಲಾಗುತ್ತದೆ. ಈ ಯೋಜನೆಯು ಗುಲ್ಬರ್ಗ, ಬಿಜಾಪುರ ಮತ್ತು ರಾಯಚೂರು ಜಿಲ್ಲೆಗಳಲ್ಲಿ ವ್ಯಾಪಿಸುತ್ತದೆ. ಈ ಯೋಜನೆಗೆ ಸಂಬಂಧಿಸಿದಂತೆ 1,17,086 ಎಕರೆ ಜಮೀನು ಭೂಸ್ವಾಧೀನಕ್ಕೆ ಪ್ರಸ್ತಾಪಿಸಿದ್ದು ಇದುವರೆಗೆ 1,07,760 ಎಕರೆ ಜಮೀನು ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಬಾಕಿ 9,326 ಎಕರೆಗೆ ಭೂ ಸ್ವಾಧೀನ ನಡವಳಿಕೆಗಳು ಪ್ರಗತಿಯಲ್ಲಿದೆ.

<u>ಭೂ ಸ್ವಾಧೀನ ಪ್ರಕರಣಗಳನ್ನು ಲೋಕ್ ಅದಾಲತ್‌ಗೆ ವಹಿಸುವ ಬಗ್ಗೆ:</u>

ಭೂ ಸ್ವಾಧೀನ ಪ್ರಕರಣವನ್ನು ಲೋಕ್ ಅದಾಲತ್‌ಗೆ ವಹಿಸುವ ಬಗ್ಗೆ ಭೂ ಸ್ವಾಧೀನ ಪ್ರಕರಣಕ್ಕೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿ ಸುಮಾರು 39,000 ಪ್ರಕರಣಗಳು ಬಾಕಿ ಇರುವುದು. ಇದರಲ್ಲಿ ಹೆಚ್ಚಿನ ಪ್ರಮಾಣ ಪ್ರಕರಣವು ಪರಿಹಾರ ಧನ ಹೆಚ್ಚಿಸುವ ಬಗ್ಗೆ ಇರುವುದು. ಈ ಪ್ರಕರಣ ವಿಲೇವಾರಿಕೆ ಬಹಳ ವಿಳಂಬವಾಗುತ್ತಿದ್ದು ಹಲವಾರು ನೀರಾವರಿ ಯೋಜನೆಗಳು, ಥರ್ಮಲ್ ಪವರ್ ಪ್ರಾಜೆಕ್ಟ್, ಕೊಂಕಣ ರೈಲ್ವೆ ಪ್ರಾಜೆಕ್ಟ್, ಎಂಎಸ್‌ಟಿಪಿ ಮುಂತಾದವುಗಳಲ್ಲಿ ಪ್ರಗತಿ ಕುಂಠಿತವಾಗಿದೆ. ನ್ಯಾಯಾಲಯದಲ್ಲಿ ಹೆಚ್ಚುವರಿ ಭೂ ಪರಿಹಾರಕ್ಕಾಗಿ ವಿಲೇವಾರಿಗೆ ಬಾಕಿ ಇರುವ ಪ್ರಕರಣದಲ್ಲಿ ಚುರುಕುಗೊಳಿಸಲು ಈ ಪ್ರಕರಣಗಳನ್ನು ಕರ್ನಾಟಕ ಕಾನೂನು ನೆರವು ಮಂಡಳಿ ಮುಖಾಂತರ ಏರ್ಪಡಿಸಲಾಗಿರುವ ಲೋಕ್ ಅದಾಲತ್‌ಗೆ ವಹಿಸಲು ತೀರ್ಮಾನ ಕೈಗೊಂಡಿದೆ. ಇದರ ಅನುಸಾರ 'ವೈ' ನಾಲಾ ಅಲೈನ್‌ಮೆಂಟ್, ಹೇಮಾವತಿ ಯೋಜನೆ, ರಾಯಚೂರು ಥರ್ಮಲ್ ಯೋಜನೆ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಗಳಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕರಣಗಳನ್ನು ಲೋಕ್ ಅದಾಲತ್‌ಗೆ ವಹಿಸುವಂತೆ ಸರ್ಕಾರವು ಆದೇಶವನ್ನು ಹೊರಡಿಸಿದೆ.

5) <u>ಎಲೆಕ್ಟ್ರಾನಿಕ್ ವಾರ್‌ಫೇರ್ ರೇಂಜ್</u>:

ರಕ್ಷಣಾ ಇಲಾಖೆಯು ಎಲೆಕ್ಟ್ರಾನಿಕ್ ವಾರ್‌ಫೇರ್ ರೇಂಜ್‌ಗಾಗಿ 900,1164 ಮತ್ತು 381 ಎಕರೆ ಜಮೀನುಗಳನ್ನು ಕ್ರಮವಾಗಿ ಬೆಂಗಳೂರು, ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಸ್ವಾಧೀನ ಪಡಿಸಿಕೊಳ್ಳಲು ಕ್ರಮ ಜರುಗಿಸಲಾಗುತ್ತಿದೆ. ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಸರ್ಕಾರ, ಭೂ ಸ್ವಾಧೀನ ಕಾಯ್ದೆಯ ತುರ್ತು ವಿಧಿಗಳನ್ನು ಬಳಸಿಕೊಳ್ಳಲು ಅನುಮತಿಸಿದೆ. ಭೂ ಸ್ವಾಧೀನ ನಡವಳಿಕೆಗಳು ಪ್ರಗತಿಯಲ್ಲಿವೆ.

8. <u>ಮನೆ ಮತ್ತು ಬಾಡಿಗೆ ನಿಯಂತ್ರಣ</u>

(1) ಬಾಡಿಗೆ ನಿಯಂತ್ರಣ ಕಾಯಿದೆಗಳಲ್ಲಿ ಅದಷ್ಟು ಏಕರೂಪತೆ ಸಾಧಿಸುವ ಮತ್ತು ಬಾಡಿಗೆದಾರ ಮತ್ತು ಮನೆ ಮಾಲೀಕರ ಸಮಸ್ಯೆಗಳನ್ನು ಅಭ್ಯಸಿಸಿ ಎಲ್ಲಾ ರಾಜ್ಯಗಳಲ್ಲೂ ಉಂಟಾಗಿರುವ ಪರಿಸ್ಥಿತಿಯನ್ನು ಪರಿಹರಿಸುವ ದಿಸೆಯಲ್ಲಿ ಭಾರತ ಸರ್ಕಾರವು ಮಾದರಿ ಬಾಡಿಗೆ

ನಿಯಂತ್ರಣ ಕಾಯಿದೆಯನ್ನು ರೂಪಿಸಿದೆ. ಅದರ ಆಧಾರದ ಮೇಲೆ ರಾಜ್ಯ ಸರ್ಕಾರವು ಅದಕ್ಕೆ ಅನುಗುಣವಾಗುವಂತೆ ಬಾಡಿಗೆ ನಿಯಂತ್ರಣ ಕಾಯಿದೆಯನ್ನು ರೂಪಿಸಲಾಗುತ್ತಿದ್ದು, ಸಧ್ಯದಲ್ಲಿಯೇ ಹೊಸ ಖಾಯಂ ಕಾಯಿದೆಯನ್ನು ತರಲು ಕ್ರಮ ಕೈಗೊಳ್ಳಲಾಗಿದೆ. ಈ ಹೊಸ ಬಾಡಿಗೆ ನಿಯಂತ್ರಣ ಕಾಯಿದೆಯಲ್ಲಿ ಮನೆ ಮಾಲೀಕರು ಮತ್ತು ಬಾಡಿಗೆದಾರರು ಇಬ್ಬರನ್ನು ಸಮದೃಷ್ಟಿಯಿಂದ ನೋಡಿ ಯಾರಿಗೂ ಅನ್ಯಾಯವಾಗದಂತಹ ಸ್ಥಿತಿಯನ್ನು ರೂಪಿಸಲಾಗುತ್ತದೆ.

ರಾಜ್ಯದ ಅತಿ ದೊಡ್ಡ ನಗರವಾದ ಬೆಂಗಳೂರು ನಗರದಲ್ಲಿ ಹಿಂದಿನ ವರ್ಷಗಳ ಪ್ರಕರಣಗಳು ಸೇರಿದಂತೆ ರಾಜ್ಯದಲ್ಲಿ ಒಟ್ಟು 1862 ಪ್ರಕರಣಗಳಲ್ಲಿ 1435 ಪ್ರಕರಣಗಳನ್ನು ವಿಲೇ ಮಾಡಲಾಗಿದೆ. ಸಧ್ಯದಲ್ಲಿ, 427 ಪ್ರಕರಣಗಳು ವಿಲೇವಾರಿ ಆಗದೇ ಬಾಕಿ ಇವೆ. ಅನಧಿಕೃತವಾಗಿ ಬಾಡಿಗೆಗೆ ಕೊಟ್ಟ 769 ಪ್ರಕರಣಗಳನ್ನು ಪತ್ತೆ ಹಚ್ಚಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿದೆ.

(2) <u>ಕರ್ನಾಟಕ ಸಾರ್ವಜನಿಕ ಸ್ಥಳ ಅನಧಿಕೃತ ಅತಿಕ್ರಮಣದಾರರನ್ನು ಎತ್ತುವರಿ ಮಾಡುವ ಬಗ್ಗೆ:</u>

ಕರ್ನಾಟಕ ಸಾರ್ವಜನಿಕ ಸ್ಥಳಗಳ (ಅನಧಿಕೃತ ಹಿಡುವಳಿದಾರರ ಎತ್ತುವರಿ) ಕಾಯಿದೆ, 1974ರ ಪ್ರಕಾರ ಸಾರ್ವಜನಿಕ ಕಟ್ಟಡಗಳಲ್ಲಿ ಅನಧಿಕೃತ ಅತಿಕ್ರಮಣಕಾರರನ್ನು ಎತ್ತುವರಿ ಮಾಡಲು ಅವಕಾಶ ಕಲ್ಪಿಸಿದೆ. ಮಂಗಳೂರು, ಕುಂದಾಪುರ, ಹೊನ್ನಾವರ. ಮತ್ತು ಕಾರವಾರ ಬಂದರು ಅಧಿಕಾರಿಗಳು ಮತ್ತು ವಿಶ್ವ ವಿದ್ಯಾಲಯ ಹಾಗೂ ಕೃಷಿ ವಿಶ್ವವಿದ್ಯಾಲಯಗಳ ಉಪ ಕುಲಪತಿಗಳನ್ನು ಈ ಕಾಯಿದೆಯಡಿ ಸಕ್ಷಮ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.

(3) <u>ಇವಾಕ್ಯೂ : ಶತ್ರು ಆಸ್ತಿಗಳನ್ನು ವಿಲೇವಾರಿ ಮಾಡುವ ಬಗ್ಗೆ:</u>

ಇವಾಕ್ಯೂ ಮತ್ತು ಶತ್ರು ಆಸ್ತಿಗಳು ಇವಾಕ್ಯೂ ಆಸ್ತಿ ಕಾಯಿದೆ ಮತ್ತು ಶತ್ರು ಆಸ್ತಿ ಕಾಯಿದೆಗಳ ಪ್ರಕಾರ ಸರ್ಕಾರಕ್ಕೆ ಸೇರಿದ ಆಸ್ತಿಗಳಾಗಿರುತ್ತವೆ. ಆದರೆ, ಕೆಲವು ಆಸ್ತಿಗಳನ್ನು ಹಲವು ವರ್ಷಗಳಿಂದಲೂ ಅನಧಿಕೃತವಾಗಿ ಕೆಲವರು ಅನುಭವಿಸಿಕೊಂಡು ಬರುತ್ತಿರುತ್ತಾರೆ. ಈ ಇವಾಕ್ಯೂ ಆಸ್ತಿಗಳನ್ನು ಸರ್ಕಾರವು ಹರಾಜು ಮೂಲಕ ಅಥವಾ ಅಧಿಕೃತವಾಗಿ ಖಾಯಂಗೊಳಿಸಬಹುದಾಗಿದೆ. ಇದರ ಪ್ರಕಾರ ವಿಲೇವಾರಿ ಮಾಡಲು ಅಂದರೆ ಮಾರ್ಕೆಟ್ ಬೆಲೆಗೆ ಅಧಿಕೃತಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಶತ್ರು ಆಸ್ತಿಗಳನ್ನು ವಿಲೆ ಮಾಡುವಂತಿಲ್ಲ. ಈ ಆಸ್ತಿಗಳಿಂದ ಬರುವ ಗುತ್ತಿಗೆ ಮೊತ್ತವನ್ನು ಮಹಾರಾಷ್ಟ್ರದಲ್ಲಿರುವ ಭಾರತ ಕಸ್ಟೋಡಿಯನ್ ಆಫ್ ಇವಾಕ್ಯೂ ಮತ್ತು ಎನಿಮಿ ಪ್ರಾಪರ್ಟಿ, ಬಾಂಬೆ ಇವರಿಗೆ ಕಳುಹಿಸಲಾಗುತ್ತಿದೆ. ಇವಾಕ್ಯೂ ಆಸ್ತಿಗಳನ್ನು ವಿಲೆ ಮಾಡಲು ಭಾರತ ಸರ್ಕಾರವು ಕರ್ನಾಟಕ ಸರ್ಕಾರದ ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಉಪ ಕಾರ್ಯದರ್ಶಿಯವರಿಗೆ, ಡಿಪಿ (ಸಿ ಮತ್ತು ಆರ) ಕಾಯಿದೆ, 1954ರ ಪ್ರಕಾರ ಸದರಿ ಆಸ್ತಿಗಳನ್ನು ವಿಲೆ ಮಾಡಲು ಅಧಿಕಾರವನ್ನು ನೀಡಿದೆ. ಸದರಿ ಅಧಿಕಾರವನ್ನು ಕರ್ನಾಟಕದ 4 ಜಿಲ್ಲಾಧಿಕಾರಿಗಳಿಗೆ ಪ್ರತ್ಯಾಯೋಜಿಸಲು ಕೋರಿ ಭಾರತ ಸರ್ಕಾರಕ್ಕೆ ದಿನಾಂಕ 28-6-1994ರಲ್ಲಿ ಮನವಿ ಮಾಡಲಾಗಿದೆ.

## 9. <u>ನೋಂದಣಿ ಮತ್ತು ಮುದ್ರಾಂಕ ಇಲಾಖೆ</u>:

1) ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಹಿಂದಿನ 2 ವರ್ಷಗಳಿಂದ ಸರ್ಕಾರದ ಆದಾಯ ಸಂಗ್ರಹಣೆಯಲ್ಲಿ 3ನೇ ಸ್ಥಾನವನ್ನು ಪಡೆದಿರುತ್ತದೆ. ಈ ಇಲಾಖೆಗಾಗಿಯೇ ಒಬ್ಬ ಪ್ರತ್ಯೇಕ ಸೂಪರ–ಟೈಂ ಐ.ಎ.ಎಸ್. ವೇತನ ಶ್ರೇಣಿಯ ಅಧಿಕಾರಿಯ ಹುದ್ದೆಯನ್ನು ಸರ್ಕಾರಿ ಆದೇಶ ಸಂಖ್ಯೆ:ಆರಡಿ 349 ಇಎನ್‌ಎಂ 94, ದಿನಾಂಕ 9–12–94ರಲ್ಲಿ ಸೃಜಿಸಿ ಆದೇಶ ಹೊರಡಿಸಲಾಗಿದೆ.

ನೋಂದಣಿ ಮಹಾ ಪರಿವೀಕ್ಷಕರು ಕರ್ನಾಟಕದ ಮುದ್ರಾಂಕಗಳ ಆಯುಕ್ತರು ಆಗಿರುತ್ತಾರೆ. ಇಲಾಖೆಯು ಈ ಕೆಳಕಂಡ ಅಧಿನಿಯಮಗಳ ಮತ್ತು ನಿಯಮಗಳನ್ನು ಕಾರ್ಯಗತಗೊಳಿಸುತ್ತದೆ:

1. ಭಾರತೀಯ ಮುದ್ರಾಂಕ ಅಧಿನಿಯಮ, 1899 ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳು :
2. ನೋಂದಣಿ ಅಧಿನಿಯಮ, 1908 ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳು.
3. ಕರ್ನಾಟಕ ಮುದ್ರಾಂಕ ಅಧಿನಿಯಮ, 1957 ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳು
4. ಭಾರತೀಯ ಪಾಲುಗಾರಿಕೆ ಅಧಿನಿಯಮ, 1932ರ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳು
5. ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳು

ಭಾರತೀಯ ಪಾಲುಗಾರಿಕೆ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳು ಮತ್ತು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಸಂಬಂಧದಲ್ಲಿ ನೋಂದಣಿ ಮಹಾ ಪರಿವೀಕ್ಷಕರು ಮತ್ತು ಸ್ಟ್ಯಾಂಪುಗಳ ಕಮಿಷನರ ರವರು ಕರ್ನಾಟಕ ರಾಜ್ಯ ಮುಖ್ಯ ನಿಯಂತ್ರಕ ಕಂದಾಯ ಅಧಿಕಾರಿಯಾಗಿರುತ್ತಾರೆ. ಜಿಲ್ಲಾ ಮಟ್ಟದಲ್ಲಿ, ಈ ಅಧಿನಿಯಮಗಳನ್ನು ಜಿಲ್ಲಾ ನೋಂದಣಾಧಿಕಾರಿಗಳು ಕಾರ್ಯಗತಗೊಳಿಸುತ್ತಾರೆ ಮತ್ತು ಅವರನ್ನು ಜಿಲ್ಲಾ ಮಟ್ಟದಲ್ಲಿ ರಿಜಿಸ್ಟ್ರಾರ ಹಾಗೂ ಸಂಸ್ಥೆಗಳ ರಿಜಿಸ್ಟ್ರಾರ ಎಂದು ನೇಮಕ ಮಾಡಲಾಗಿದೆ.

2) 1994–95ನೇ ಸಾಲಿಗೆ ನವೆಂಬರ 94ರ ಮಾಹೆಯ ಅಂತ್ಯದವರೆಗೆ ವರ್ಷಾವಧಿ 3,68,982 ದಸ್ತಾವೇಜುಗಳ ನೋಂದಣಿ ಮಾಡಿದೆ, ಅಲ್ಲದೆ ಇಲಾಖೆಯು ದಿನಾಂಕ 30–11–1994ರವರೆಗೆ ಒಟ್ಟು 229.51 ಕೋಟಿ ರೂಗಳು ಹಾಗೂ ನಿವ್ವಳ 214.72 ಕೋಟಿ ರೂಗಳ ರಾಜಸ್ವವನ್ನು ಗಳಿಸಿದೆ. ಉಳಿಕೆ ಒಟ್ಟು 123.79ಕೋಟಿ ರೂಗಳು ಮತ್ತು ನಿವ್ವಳ ರೂ.145.28 ಕೋಟಿಗಳ ರಾಜಸ್ವ ಆದಾಯವನ್ನು ನಿರೀಕ್ಷಿಸಬಹುದಾಗಿದೆ.

ಇಲಾಖೆಯು '' 2030–ಮುದ್ರಾಂಕ ಹಾಗೂ ನೋಂದಣಿ'' ಲೆಕ್ಕದ ಶೀರ್ಷಿಕೆಯಲ್ಲಿ ಸಿಬ್ಬಂದಿ ವೆಚ್ಚಗಳಿಗಾಗಿ ಸ್ಟ್ಯಾಂಪ ಕಾಗದ, ಫ್ರಾಂಕಿಂಗ ಮತ್ತು ನ್ಯಾಯೇತರ ಮಾರಾಟಗಾರರಿಗೆ ಸಂದಾಯ ಮಾಡಿದ ಕಮಿಷನಾಗಿ ಹಾಗೂ ಇತರೆ ವೆಚ್ಚಕ್ಕೆ ಒಟ್ಟು 7,39,55,388–00 ರೂ.ಗಳ ವೆಚ್ಚ ದಿನಾಂಕ 31–11–1994ರವರೆಗೆ ಆಗಿರುತ್ತದೆ.

3. ಕರ್ನಾಟಕ ಮುದ್ರಾಂಕ ಕಾಯ್ದೆ, 1957ರ ಅಡಿಯಲ್ಲಿ ಕಲಂ—45 ಎ ಜಾರಿಯಲ್ಲಿ ಇರುತ್ತದೆ ಮತ್ತು ಕಲಂ – 45ಎ ನ್ನು ಬಹುತೇಕ ಎಲ್ಲಾ ತಾಲ್ಲೂಕು ಮುಖ್ಯ ಪಟ್ಟಣಗಳಿಗೆ ವ್ಯಾಪಿಸಲಾಗಿದೆ. ಇದುವರೆವಿಗೂ ಅಂದರೆ, ದಿನಾಂಕ 30—11—94ರ ಅಂತ್ಯಕ್ಕೆ ಪ್ರಕರಣಗಳ ವಿಲೇವಾರಿ ಹಾಗೂ ಸಾಧಿಸಿದ ಪ್ರಗತಿ ಈ ಕೆಳಕಂಡಂತೆ ಇರುತ್ತದೆ:

| | | |
|---|---|---|
| 1. 45ಎ ಅಡಿಯಲ್ಲಿ ಗುರುತಿಸಿದ ಒಟ್ಟು ಪ್ರಕರಣಗಳ ಸಂಖ್ಯೆ | : | 59,138 |
| 2. ವಿಲೇವಾರಿಯಾದ ಒಟ್ಟು ಪ್ರಕರಣಗಳ ಸಂಖ್ಯೆ | : | 1,684 |
| 3. ಇತ್ಯರ್ಥವಾಗಬೇಕಾದ ಪ್ರಕರಣಗಳ ಸಂಖ್ಯೆ | : | 57,454 |
| 4. ವಿಲೇವಾರಿ ಒಳಗೊಂಡಿರುವ ಮೊತ್ತ | : | 13,98,72,492—00 |
| 5. ವಿಲೇವಾರಿಗೆ ಒಳಗೊಂಡಿರುವ ಮೊತ್ತದಲ್ಲಿ ನಿರ್ಧಿಷ್ಟವಾಗಿ ವಸೂಲಾತಿಯಾಗಿರುವ ಹಣ | : | 86,96,720—00 |
| 6. ವಸೂಲಾಗಬೇಕಾದ ಮೊಬಲಗು | : | 13,11,75,772—00 |

## 10. ಭೂ ಮಾಪನ

ಈ ಇಲಾಖೆಯು ಭೂ ಹಿಡುವಳಿಗಳ ಮತ್ತು ನಗರ ಆಸ್ತಿಗಳ ಅಳತೆ, ನಕಾಶೆ ತಯಾರಿಕೆ ಕಂದಾಯ ನಿರ್ಣಯ ಮತ್ತು ಭೂದಾಖಲೆಗಳ ಕಾಲೋಚಿತ ಕಾರ್ಯಗಳನ್ನು ನಿರ್ವಹಿಸುತ್ತದೆ.

1) ಪೋಡಿ ಪ್ರಕರಣಗಳ ವಿಲೇವಾರಿ:

ಈ ವರ್ಷದ ಪ್ರಾರಂಭದಲ್ಲಿ 1,91,662 ಪೋಡಿ ಪ್ರಕರಣಗಳು ಬಾಕಿ ಇದ್ದು ಪ್ರಸಕ್ತ ಸಾಲಿನಲ್ಲಿ ಅಂದರೆ 1—1—94ರಿಂದ 30—11—94ರ ಅವಧಿಯಲ್ಲಿ 94,052 ಪ್ರಕರಣಗಳು ಸ್ವೀಕೃತಿಯಾದಂತೆ ಒಟ್ಟು ಪ್ರಕರಣಗಳ ಸಂಖ್ಯೆ 2,85,714 ಆಗಿರುತ್ತದೆ. ಇವುಗಳ ಪೈಕಿ 67,070 ಪ್ರಕರಣಗಳನ್ನು ನಿಖಾರಿಗೊಳಿಸಿ 2,18,664 ಬಾಕಿ ಉಳಿದಿರುತ್ತದೆ. ಸರಾಸರಿ ಪ್ರತಿ ಮಾಹೆಯಲ್ಲಿ 494 ಭೂ ಮಾಪಕರುಗಳನ್ನು ಮೇಲೆ ಕಾಣಿಸಿದ ಪ್ರಕರಣಗಳನ್ನು ವಿಲೇವಾರಿ ಮಾಡಲು ನಿಯೋಜಿಸಲಾಗಿತ್ತು.

2) ನಗರ ಮಾಪನ ಕಾರ್ಯ:

ಬೆಂಗಳೂರು ವಿಭಾಗದಲ್ಲಿ ಮೂರು ಪಟ್ಟಣಗಳು, ಬೆಳಗಾವಿ ವಿಭಾಗದಲ್ಲಿ 42 ನಗರ : ಪಟ್ಟಣಗಳು, ಗುಲ್ಬರ್ಗಾ ವಿಭಾಗದಲ್ಲಿ 2 ನಗರ ಹಾಗೂ ಮೈಸೂರು ವಿಭಾಗದಲ್ಲಿ 1 ಪಟ್ಟಣ ಇವುಗಳ ನಗರ ಮಾಪನ ದಾಖಲೆಗಳ ಕಾಲೋಚಿತ ಕಾರ್ಯದ ಪ್ರಗತಿಯು ಮುಂದುವರೆದಿದೆ.

ಮೈಸೂರು ನಗರ ಮಾಪನದ ಕಾರ್ಯಾಲಯದಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿ ವರ್ಗವನ್ನು ಸರ್ಕಾರದ ಪತ್ರದ ಸಂಖ್ಯೆ ಕಂ.ಇ 314:ಎಫ್ಎಲ್ಆರ 94 ದಿನಾಂಕ: 13—12—94ರ ಆದೇಶದ ಮೇರೆಗೆ ಸ್ಥಳ ನಿಯುಕ್ತಿ ಮಾಡಿರುತ್ತೆ.

ಆಸ್ತಿದಾರರಿಂದ : ಮುನಿಸಿಪಾಲಿಟಿ ಹಾಗೂ ಕಾರ್ಪೋರೇಷನಗಳಿಂದ ಪ್ರತಿ ವಿಭಾಗದಲ್ಲಿ ಪ್ರಸಕ್ತ ಸಾಲಿನಲ್ಲಿ ವಸೂಲಿ ಮಾಡಿದ ನಕ್ಷೆಯ ಶುಲ್ಕದ ವಿವರ ಈ ಕೆಳಕಂಡಂತೆ ಇದೆ.

| | |
|---|---|
| 1) ಬೆಂಗಳೂರು ವಿಭಾಗ | : ರೂ.7,28,003-10 ಪೈಸೆ |
| 2) ಬೆಳಗಾವಿ ವಿಭಾಗ | : ರೂ. 33,363-12 ಪೈಸೆ |
| 3) ಗುಲ್ಬರ್ಗಾ ವಿಭಾಗ | : ರೂ. 13,444-00 ಪೈಸೆ |
| 4) ಮೈಸೂರು ವಿಭಾಗ | : ರೂ.1,51,423-55 ಪೈಸೆ |
| ಒಟ್ಟು : | ರೂ.9,26,233-77 ಪೈಸೆ |

3) <u>ಕರ್ನಾಟಕ ಮತ್ತು ನೆರೆ ರಾಜ್ಯಗಳಾದ ಕೇರಳ ಮತ್ತು ಆಂಧ್ರ ರಾಜ್ಯಗಳ ಅಂತರ ರಾಜ್ಯ ಗಡಿ ಪರಿಶೀಲನಾ ಕಾರ್ಯ:</u>

(1) ಕರ್ನಾಟಕ ಮತ್ತು ಕೇರಳ ರಾಜ್ಯಗಳ ಗಡಿ ಪರಿಶೀಲನಾ ಕಾರ್ಯ

(ಅ) ಕೊಡಗು ಜಿಲ್ಲೆಗೆ ಹೊಂದಿಕೊಂಡಂತೆ 1,000 'ಟಿ' ಸ್ಟೇಷನ ಬಾಬ್ತು ಕೆಲವು ನ್ಯೂನತೆಗಳು ಕಂಡು ಬಂದದ್ದರಿಂದ ಇವುಗಳನ್ನು ಸರಿಪಡಿಸಿದ ತರುವಾಯ ಮರು ಪರಿಶೀಲನೆ ನಡೆಸಿ ಕೇರಳ ರಾಜ್ಯಕ್ಕೆ ಸಂಬಂಧಿಸಿದ ಅಧಿಕಾರಿಗಳಿಗೆ ಮುಂದಿನ ಪರಿಶೀಲನೆ ಮತ್ತು ದೃಢೀಕರಿಸುವ ಸಲುವಾಗಿ ಕಳುಹಿಸಲಾಗಿರುತ್ತದೆ.

(ಅ) ದಕ್ಷಿಣ ಕನ್ನಡ ಜಿಲ್ಲೆಗೆ ಹೊಂದಿಕೊಂಡಂತೆ ಜಂಟಿ ಪರಿಶೀಲನಾ ಕಾರ್ಯ 45.59 ಕಿ.ಮೀ. ದೂರದ ಪರಿಶೀಲನೆಯಾಗಬೇಕಾಗಿದ್ದು ಈ ಕಾರ್ಯವನ್ನು ಎರಡೂ ರಾಜ್ಯಗಳ ನಿರ್ದೇಶಕರು ಪರಸ್ಪರ ಚರ್ಚೆ ನಡೆಸಿ ಪ್ರಸ್ತುತ ಋತುಮಾನದ ಕಾಲದಲ್ಲಿ ಕೈಗೆತ್ತಿಗೊಳ್ಳಲಾಗುವುದು.

(2) ಕರ್ನಾಟಕ ಆಂಧ್ರ ಗಡಿ ಪರಿಶೀಲನಾ ಕಾರ್ಯ:

ನಿರ್ದಿಷ್ಟ ಸ್ಥಳದಲ್ಲಿ ಕೆಲವು ನ್ಯೂನತೆಗಳು ಕಂಡು ಬಂದಿದ್ದರಿಂದ ಇವುಗಳ ಮರು ಪರಿಶೀಲನಾ ಕಾರ್ಯವನ್ನು ಎರಡೂ ರಾಜ್ಯಗಳ ಭೂದಾಖಲೆಗಳ ಸಂಯುಕ್ತ ನಿರ್ದೇಶಕರುಗಳು ಪ್ರಸಕ್ತ ಋತುಮಾನದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

(4) <u>ಗ್ರಾಮ ನಕಾಶೆಗಳ ಮುದ್ರಣ ಮತ್ತು ಸರಬರಾಜು:</u>

ಕೇಂದ್ರ ಕಛೇರಿಯ ಆವರಣದಲ್ಲಿ ಅಳವಡಿಸಿರುವ ಆಧುನಿಕ ಮುದ್ರಣ ಯಂತ್ರ ಚಲನೆಯು ಪ್ರಗತಿಯಲ್ಲಿದೆ.

ಒಟ್ಟು 6243 ಗ್ರಾಮ ನಕಾಶೆಗಳ ಟ್ರೇಸಿಂಗ ಕಾರ್ಯ ಪೂರೈಸಿದ್ದು ಸದರಿ ನಕಾಶೆಗಳ ಮುದ್ರಣಕ್ಕೆ ಸಿದ್ಧವಾಗಿದೆ. ಪ್ರಸಕ್ತ ಅವಧಿಯಲ್ಲಿ 23 ಗ್ರಾಮ ನಕಾಶೆಗಳನ್ನು ಮುದ್ರಣ ಮಾಡಿ ಸಾಕಷ್ಟು ಪ್ರಮಾಣದಲ್ಲಿ ಭೂದಾಖಲೆಗಳ ಸಹಾಯಕ ನಿರ್ದೇಶಕರವರುಗಳಿಗೆ ಸರಬರಾಜು ಮಾಡಲಾಗಿದೆ. ಇದಲ್ಲದೆ 15 ತಾಲ್ಲೂಕು ನಕಾಶೆಗಳು ಹಾಗೂ 2 ಜಿಲ್ಲಾ ನಕಾಶೆಗಳನ್ನು ಮುದ್ರಣ ಮಾಡಿ ಕೇಂದ್ರ ಕಛೇರಿಯಲ್ಲಿ ಮಾರಾಟ ಮಾಡುವ ಸಲುವಾಗಿ ಇಡಲಾಗಿದೆ.

5) <u>ಹರಿದು ಹೋದ ಭೂ ದಾಖಲೆಗಳ ಪುನರ ನಿರ್ಮಾಣ ಕಾರ್ಯ:</u>

ಹರಿದು ಹೋದ ಭೂದಾಖಲೆಗಳ ಪುನರ ನಿರ್ಮಾಣ ಕಾರ್ಯದಲ್ಲಿ 99 ಗ್ರಾಮಗಳಲ್ಲಿ 18,423 ಸ.ನಂ.ಗಳ ಟಿಪ್ಪಣಿಗಳ ನಕಲುಗಳನ್ನು ಈ ಅವಧಿಯಲ್ಲಿ ತಯಾರಿಸಲಾಗಿದೆ. ಹಿಂದಿನ ಅವಧಿಯಲ್ಲಿ ಈಗಾಗಲೇ ನಮೂದಿಸಿರುವ ನಕಲುಗಳು ಸೇರಿ ಒಟ್ಟು 3273 ಗ್ರಾಮಗಳ ಬಾಬ್ತು 4,97,190 ಸ.ನಂ.ಗಳ ಟಿಪ್ಪಣಿಗಳನ್ನು ತಯಾರು ಮಾಡಲ್ಪಟ್ಟಿರುತ್ತದೆ.

6) <u>ಭೂ ಮಾಪನ ಮತ್ತು ಕಂದಾಯ ವ್ಯವಸ್ಥೆ ತರಬೇತಿ ಸಂಸ್ಥೆಯಲ್ಲಿ ನಡೆದ ಕಾರ್ಯ ಕ್ರಮಗಳ ಪ್ರಗತಿ:</u>

ಭೂಮಾಪನ ಮತ್ತು ಕಂದಾಯ ವ್ಯವಸ್ಥೆ ತರಬೇತಿ ಸಂಸ್ಥೆ, ಮೈಸೂರು ಈ ಸಂಸ್ಥೆಯಲ್ಲಿ ಈ ಕೆಳಕಂಡ ಅಧಿಕಾರಿಗಳು ಹಾಗೂ ಹೊಸದಾಗಿ ನೇಮಕಗೊಂಡ ಭೂಮಾಪಕರುಗಳಿಗೆ ಭೂಮಾಪನ ಮತ್ತು ಕಂದಾಯ ವ್ಯವಸ್ಥೆ ವಿಷಯಗಳಲ್ಲಿ ತರಬೇತಿ ನೀಡಲಾಗಿರುತ್ತೆ.

| | | |
|---|---|---|
| 1) ಅನುಕಂಪದ ಆಧಾರದ ಮೇಲೆ ನೇಮಕಗೊಂಡ ಎರಡನೇ ದರ್ಜೆ ಭೂಮಾಪಕರು | — | 5 |
| 2) ಎರಡನೇ ದರ್ಜೆ ಭೂಮಾಪಕರ ಹುದ್ದೆಗೆ ಬಡ್ತಿ ಹೊಂದಿದ ಇಲಾಖಾ ನೌಕರರಾದ ದಪ್ತರ ಬಂದ ಮತ್ತು ಬಾಂಡು ಜವಾನರು | — | 29 |
| 3) ಹೊಸದಾಗಿ ನೇಮಕಗೊಂಡ ಅಭ್ಯರ್ಥಿಗಳು ಎರಡನೇ ದರ್ಜೆ ಭೂಮಾಪಕರ ಹುದ್ದೆಗೆ ನೇಮಕಗೊಂಡಿರುವರು | — | 93 |
| ಒಟ್ಟು : | | 127 |

7) <u>ಮಾಜಿ ಇನಾಂ ಗ್ರಾಮಗಳ ಹಿಸ್ಸಾ ಸರ್ವೆ ಕಾರ್ಯ:</u>

ಒಟ್ಟು 33 ಗ್ರಾಮಗಳು ಹಿಸ್ಸಾ ಸರ್ವೆ ಕಾರ್ಯಕ್ಕೆ ಬಾಕಿ ಇರುತ್ತವೆ. ಕಂದಾಯ ಇಲಾಖೆಯಿಂದ ಇನ್ನೂ 20 ಗ್ರಾಮಗಳ ಪ್ರಿಲಿಮಿನರಿ ರಿಕಾರ್ಡ್ ಆಫ್ ರೈಟ್ಸ್ ಬರಬೇಕಾಗಿರುತ್ತೆ. ಉಳಿದ 11 ಗ್ರಾಮಗಳ ಹಿಸ್ಸಾ ಸರ್ವೆ ಕಾರ್ಯಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತೆ, ಹಾಗೂ 2 ಹಿಸ್ಸಾ ಸರ್ವೆ ಗ್ರಾಮಗಳನ್ನು ಅಧಿಸೂಚನೆ ಹೊರಡಿಸುವ ಸಲುವಾಗಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆ.

8) <u>ಕೊಡಗು ಜಿಲ್ಲೆಯ ಮರು ಭೂಮಾಪನ ಕಾರ್ಯ:</u>

ಸೋಮವಾರ ಪೇಟೆ ತಾಲ್ಲೂಕಿನಲ್ಲಿರುವ 298 ಗ್ರಾಮಗಳ ಪೈಕಿ 272 ಗ್ರಾಮಗಳ ಅಳತೆ ಕಾರ್ಯವನ್ನು ಪೂರೈಸಿರುತ್ತೆ. ಬಾಕಿ ಇರುವ ಕೆಲಸಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| | |
|---|---|
| ಸೋಮವಾರಪೇಟೆ ತಾಲ್ಲೂಕಿನಲ್ಲಿರುವ ಒಟ್ಟು ಗ್ರಾಮಗಳು | — 298 |
| ಅಡವಿ ಕೆಲಸ ಪೂರೈಸಿದ ಗ್ರಾಮಗಳು | — 272 |
| ಅಡವಿ ಕಾರ್ಯ ಇನ್ನೂ ಪೂರೈಸಬೇಕಾಗಿರುವ ಗ್ರಾಮಗಳು | — 26 |
| ತಪಾಸಣಿ ಕಾರ್ಯ ಪೂರೈಸಿದ ಗ್ರಾಮಗಳು(30-11-94ರ ವರೆಗೆ) | — 246 |
| ತಪಾಸಣಿ ಕಾರ್ಯ ಇನ್ನೂ ಪೂರೈಸಬೇಕಾದ ಗ್ರಾಮಗಳು | — 26 |

ಕೊಡಗು ಮರು ಭೂಮಾಪನ ಕಾರ್ಯವನ್ನು ಹಾಲಿ ಸ್ಥಗಿತಗೊಳಿಸಿರುತ್ತೆ. ಕೊಡಗು ಮರು ಭೂಮಾಪನ ಕಾರ್ಯಾಲಯದಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿ ವರ್ಗದವರನ್ನು ಸ್ಥಳ ನಿಯುಕ್ತಿಯನ್ನು ದಿನಾಂಕ 31-12-94ರಿಂದ ನಿಯುಕ್ತಿಗೊಳಿಸಲಾಗಿದೆ.

9) <u>1994-95ನೇ ಸಾಲಿನ ಅನುದಾನ ಮತ್ತು ವೆಚ್ಚ:</u>

1994-95ನೇ ಸಾಲಿಗೆ ರೂ.21,10,73,000ಗಳ ಅನುದಾನವನ್ನು ಈ ಇಲಾಖೆಗೆ ನೀಡಿದೆ. ಈ ಪೈಕಿ ದಿನಾಂಕ 1-4-93 ರಿಂದ 30-11-94ರ ಅಂತ್ಯಕ್ಕೆ ರೂ.14,13,00,000ಗಳನ್ನು ಖರ್ಚು ಮಾಡಲಾಗಿರುತ್ತದೆ.

10) <u>ಸೂಕ್ಷ್ಮದರ್ಶಕ ಘಟಕವನ್ನು ಸ್ಥಾಪಿಸಿದ ಕುರಿತು: (ಮೈಸೂರು, ಬೆಂಗಳೂರು)</u>

ಮೂಲ ಭೂದಾಖಲೆಗಳನ್ನು ಈ ಶತಮಾನದ ಹಿಂದಿನಿಂದಲೇ ತಯಾರಿಸಲ್ಪಟ್ಟದ್ದು ದೀರ್ಘಕಾಲದಿಂದಲೂ ದೈನಂದಿನ ಕೆಲಸಕ್ಕಾಗಿ ಉಪಯೋಗಿಸಲ್ಪಟ್ಟದ್ದರಿಂದ ಬಹಳ ಶಿಥಿಲಗೊಂಡಿದ್ದು ಕಾರಣ ಈ ಭೂದಾಖಲೆಗಳನ್ನು ಸಂರಕ್ಷಿಸುವ ದೃಷ್ಟಿಯಿಂದ ಸೂಕ್ಷ್ಮದರ್ಶಕ ಘಟಕವನ್ನು ಕೇಂದ್ರ ಕಛೇರಿಯ ಆವರಣದಲ್ಲಿ ಸ್ಥಾಪಿಸಲಾಗಿದೆ.

ಆರ್ಥಿಕ ವರ್ಷ 1994-95ರಲ್ಲಿ 21.00 ಲಕ್ಷ ರೂಗಳನ್ನು ಯೋಜನೆಯಡಿಯಲ್ಲಿ ಮಂಜೂರು ಮಾಡಲಾಗಿದ್ದು ಅದನ್ನು ಸೂಕ್ಷ್ಮ ಚಿತ್ರೀಕರಣಕ್ಕೆ ಬೇಕಾಗುವಂತಹ ಫಿಲಂ, ಫಿಕ್ಸರ್ಸ್ ಮತ್ತು ಡೆವಲಪರ ಮುಂತಾದ ವಸ್ತುಗಳನ್ನು ಕೊಳ್ಳಲು ಉಪಯೋಗಿಸಲಾಗುವುದು.

11) <u>ಮರು ಭೂಮಾಪನ ಕಾರ್ಯ:</u>

ಭೂಕಂದಾಯ ಅಧಿನಿಯಮದ ರೀತ್ಯಾ ಮರು-ಭೂಮಾಪನ ಕಾರ್ಯವನ್ನು 30 ವರ್ಷಗಳಿಗೊಮ್ಮೆ ಕೈಗೆತ್ತಿಕೊಳ್ಳಬೇಕಾಗಿರುತ್ತೆ. 1995ರಲ್ಲಿ ಮರು-ಭೂಮಾಪನ ಕಾರ್ಯವನ್ನು ಕೈಗೊಳ್ಳಬೇಕಾಗಿರುತ್ತೆ.

ಹಾಲಿ ಭೂಮಾಪನ ಕಾರ್ಯವನ್ನು ಈಗ ಕೈಗೊಳ್ಳಬೇಕಾಗಿದ್ದು, ಈ ಬಗ್ಗೆ ಈಗಾಗಲೇ ಮರು-ಭೂಮಾಪನ ಕಾರ್ಯವನ್ನು ಕೈಗೊಳ್ಳುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

12) ಭೂಮಾಪನ ಮತ್ತು ಕಂದಾಯ ವ್ಯವಸ್ಥೆ ತರಬೇತಿ ಸಂಸ್ಥೆ, ಮೈಸೂರು ಬಲವರ್ಧನೆ ಕುರಿತು:

ಈ ಸಂಸ್ಥೆ ಆಧುನೀಕರಣಗಳೊಂದಿಗೆ ಬಲವರ್ಧಿಸಲು ನವೀನ ಉಪಕರಣಗಳು, ಥಿಯೋಡಲೈಟ್ ಉಪಕರಣಗಳನ್ನು ಹಾಗೂ ಒಂದು ಮಿನಿ ಬಸನ್ನು ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಖರೀದಿಸಲಾಗಿದೆ. ಸದರಿ ತರಬೇತಿ ಸಂಸ್ಥೆಗೆ ಸ್ವಂತ ಕಟ್ಟಡ ನಿರ್ಮಾಣದ ಸಲುವಾಗಿ 21.00 ಲಕ್ಷ ರೂಗಳನ್ನು ಸರ್ಕಾರದಿಂದ ಈಗಾಗಲೇ ಯೋಜನೆ ಅಡಿಯಲ್ಲಿ ಮಂಜೂರಾತಿಯನ್ನು ಪಡೆಯಲಾಗಿದೆ. ಅಲ್ಲದೆ, ತರಬೇತಿ ಸಂಸ್ಥೆಯ ಆಡಳಿತ ಕಛೇರಿ ಕಟ್ಟಡದ ನಿರ್ಮಾಣಕ್ಕಾಗಿ 42.00 ಲಕ್ಷ ರೂ.ಗಳ ಬಿಡುಗಡೆಗಾಗಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ. ಕಾಮಗಾರಿಯನ್ನು ಕರ್ನಾಟಕ ಭೂಸೇನಾ ನಿಗಮ ಇವರಿಗೆ ವಹಿಸಲಾಗಿದೆ.

13) ಎರಡನೇ ದರ್ಜೆ ಭೂಮಾಪಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ:

ಹಾಲಿ, 1,328 ಎರಡನೇ ದರ್ಜೆ ಭೂಮಾಪಕರ ಹುದ್ದೆಗಳು ಖಾಲಿ ಇವೆ. ಇಲಾಖೆಯ ಹುದ್ದೆ ನೇಮಕಾತಿ ನಿಯಮಾವಳಿ ಪ್ರಕಾರ ಶೇಕಡ–75ರಷ್ಟು ಹುದ್ದೆಗಳನ್ನು ನೇರ–ನೇಮಕಾತಿ ಮೂಲಕವೂ, ಉಳಿದ ಶೇಕಡಾ 25ರಷ್ಟು ಹುದ್ದೆಗಳನ್ನು ಇಲಾಖೆಯ ಬಾಂದ ಜವಾನರ ಹಾಗೂ ದಫ್ತರಬಂದ ಹುದ್ದೆಗಳಿಂದ ಮುಂಬಡ್ತಿ ನೀಡಬೇಕಾಗಿರುತ್ತದೆ. ಮೀಸಲಾತಿ ಆದೇಶ ಹೊರಡಿಸಿದ ನಂತರ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸೂಕ್ತ ಕ್ರಮ ಜರುಗಿಸಲಾಗುವುದು.

14) ಹೈದರಾಬಾದ ಸರ್ವೇಕ್ಷಣಾ ತರಬೇತಿ ಸಂಸ್ಥೆಯಲ್ಲಿ ಹಳೆ ಸಿಬ್ಬಂದಿಗೆ ಇಲಾಖಾ ವಿಷಯದ ಬಗ್ಗೆ ಹೆಚ್ಚಿನ ತರಬೇತಿ ನೀಡುವ ಬಗ್ಗೆ:

ಮೈಸೂರಿನಲ್ಲಿ ಇಲಾಖಾ ವತಿಯಿಂದ ಸರ್ವೇಕ್ಷಣಾ ವಿಷಯದ ಬಗ್ಗೆ ತರಬೇತಿ ನೀಡುವ ಬಾಬ್ತು, ಭೂಮಾಪನ ಕಂದಾಯ ವ್ಯವಸ್ಥೆ ತರಬೇತಿ ಸಂಸ್ಥೆಯೊಂದು ಇದ್ದು, ಸದರಿ ಸಂಸ್ಥೆಯಲ್ಲಿ ಹೊಸದಾಗಿ ಇಲಾಖೆಗೆ ನೇಮಕಗೊಳ್ಳುವ ಪ್ರೊಬೇಷನರಿ ಅಧಿಕಾರಿಗಳಿಗೆ ಹಾಗೂ ಎರಡನೇ ದರ್ಜೆ ಭೂಮಾಪಕರುಗಳಿಗೆ ತರಬೇತಿ ನೀಡಲಾಗುತ್ತಿದೆ. ಹಿಂದಿನಿಂದ ಜಾರಿಯಲ್ಲಿದ್ದ ಹಳೆ ಪದ್ಧತಿಯನ್ನು ಅನುಸರಿಸಿ ಸಿಬ್ಬಂದಿ ವರ್ಗಕ್ಕೆ ತರಬೇತಿ ನೀಡಲಾಗುತ್ತಿದೆ.

ಈಗಿನ ಮುಂದುವರಿದ ತಾಂತ್ರಿಕತೆ ಮತ್ತು ವಿಜ್ಞಾನದ ದೃಷ್ಟಿಯಿಂದ ಹೊಸ ಹೊಸ ವಿಧಾನಗಳನ್ನು ಅಳವಡಿಸಬೇಕಾಗಿದೆ. ಈಗಿನ ಯುಗಕ್ಕೆ ಹಳೆ ಪದ್ಧತಿಯನ್ನು ಬಿಟ್ಟು ಹೊಸ ವಿಧಾನಗಳನ್ನು ಅನುಸರಿಸಬೇಕಾಗಿದೆ.

ಹಾಲಿ ಸರ್ವೇಕ್ಷಣಾ ಇಲಾಖಾ ವತಿಯಿಂದ ಹೈದರಾಬಾದಿನ ಸರ್ವೆ ತರಬೇತಿ ಸಂಸ್ಥೆಯಿಂದ ಆಧುನಿಕ ವಿಧಾನಗಳಿಂದ ಸರ್ವೆ ಬಗ್ಗೆ ತರಬೇತಿಯನ್ನು ನೀಡುತ್ತಿದ್ದು, ಸದರಿ ಸಂಸ್ಥೆಗೆ ಈ ಇಲಾಖೆಯಿಂದ ಹಂತ ಹಂತವಾಗಿ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿ ವರ್ಗಕ್ಕೆ ತರಬೇತಿಯನ್ನು ನೀಡುವ ಬಗ್ಗೆ ಯೋಜನೆಯನ್ನು ರೂಪಿಸಲಾಗಿದೆ.

ಈ ಬಗ್ಗೆ ಕೇಂದ್ರ ಸರ್ಕಾರವೂ ಸಹ ಶೇಕಡಾ—50ರ ಧನಸಹಾಯವನ್ನು ನೀಡಲು ಮುಂದೆ ಬಂದಿದ್ದು, ಇದರಿಂದಾಗಿ ರೆಕಾರ್ಡ್ಸ್ ಆಡಳಿತವನ್ನು ಬಲವರ್ಧನೆಗೊಳಿಸಲು ಮತ್ತು ಭೂದಾಖಲೆಗಳನ್ನು ಕಾಲಕಾಲಕ್ಕೆ ಅನುಸರಿಸಲು ಸಹಕಾರಿಯಾಗುತ್ತದೆ.

20 ಅಧಿಕಾರಿಗಳನ್ನು ಹಾಗೂ ಸುಮಾರು 100 ಭೂಮಾಪಕರುಗಳನ್ನು ಮುಂದಿನ 2 ವರ್ಷಗಳಲ್ಲಿ ತರಬೇತಿಗೆ ಕಳುಹಿಸುವ ಉದ್ದೇಶ ಹೊಂದಿರುತ್ತದೆ.

15) <u>ನಗರ ಭೂಮಾಪನ ಜಾರಿಯಾಗದೇ ಇರುವ ನಗರ : ಪಟ್ಟಣಗಳಿಗೆ ನಗರ ಭೂಮಾಪನ ಕಾರ್ಯ ಕೈಗೊಳ್ಳುವ ಬಗ್ಗೆ:</u>

ಅಳತೆಯಾಗದಿರುವ ನಗರ : ಪಟ್ಟಣಗಳ ನಗರ ಮಾಪನಾ ಕಾರ್ಯವನ್ನು ಹಂತ ಹಂತವಾಗಿ ಕೈಗೊಳ್ಳಲಾಗುವುದು.

## 11. <u>ಮುಜರಾಯಿ</u>

(1) ಕರ್ನಾಟಕ ರಾಜ್ಯದ ಧಾರ್ಮಿಕ ಸಂಸ್ಥೆಗಳ ಆಡಳಿತವು ಆಯಾ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಐದು ಕಾಯಿದೆಗಳ ಮೇರೆಗೆ ನಡೆಸಲ್ಪಡುತ್ತದೆ.

| | | |
|---|---|---|
| 1) ಹಳೇ ಮೈಸೂರು ಪ್ರದೇಶ | : | ಮೈಸೂರು ರಿಲಿಜಿಯಸ್ ಅಂಡ್ ಚಾರಿಟಬಲ್ ಇನ್ಸ್‌ಟಿಟ್ಯೂಷನ್ಸ್ ಆಕ್ಟ್ 1927 |
| 2) ಹಳೇ ಮದರಾಸು ಪ್ರದೇಶ | : | ಹಿಂದೂ ರಿಲಿಜಿಯಸ್ ಅಂಡ್ ಚಾರಿಟಬಲ್ ಎಂಡೋಮೆಂಟ್ಸ್ ಆಕ್ಟ್, 1951 |
| 3) ಹಳೇ ಮುಂಬಯಿ ಪ್ರದೇಶ | : | ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್, 1950 |
| 4) ಹಳೇ ಹೈದರಾಬಾದ ಪ್ರದೇಶ | : | ಹೈದರಾಬಾದ ಎಂಡೋಮೆಂಟ್ಸ್ ರೆಗ್ಯುಲೇಷನ 1349 ಫಸಲಿ |
| 5) ಕೊಡಗು ಪ್ರದೇಶದ 10 ದೇವಾಲಯಗಳು | : | ಕೂರ್ಗ್ ಟೆಂಪಲ್ ಫಂಡ್ ಮ್ಯಾನೇಜ್‌ಮೆಂಟ್ ಆಕ್ಟ್ 1956. |

ಕರ್ನಾಟಕದ ಎಲ್ಲಾ ದೇವಾಲಯಗಳಿಗೆ ಸಂಬಂಧಿಸಿದಂತೆ 'ಏಕರೂಪ ಕಾನೂನು ಶಾಸನವನ್ನು ಜಾರಿಗೆ ತರುವ ಬಗ್ಗೆ ಸರ್ಕಾರದಲ್ಲಿ ಪ್ರಸ್ತಾವನೆಯನ್ನು ಅಂತಿಮವಾಗಿ ಪರಿಶೀಲಿಸಲಾಗುತ್ತಿದೆ.

ರಾಜ್ಯದ ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳ ಆಡಳಿತ ವ್ಯವಸ್ಥೆ ಮತ್ತು ಅಭಿವೃದ್ಧಿಗಳನ್ನು ನೋಡಿಕೊಳ್ಳುವುದು ಈ ಇಲಾಖೆಯ ಮುಖ್ಯ ಕಾರ್ಯವಾಗಿರುತ್ತದೆ.

ಧಾರ್ಮಿಕ ದತ್ತಿ ಆಯುಕ್ತರು ಈ ಇಲಾಖಾ ಮುಖ್ಯಸ್ಥರಾಗಿದ್ದು ಹಳೆಯ ಮೈಸೂರು ಪ್ರದೇಶ ಮತ್ತು ಹಳೆಯ ಹೈದರಾಬಾದ ಪ್ರದೇಶಗಳಲ್ಲಿ ಕಂದಾಯ ಅಧಿಕಾರಿಗಳು ಸಹಾಯಕರಾಗಿರುತ್ತಾರೆ. ಹಳೆಯ ಮದರಾಸು ಪ್ರದೇಶದಲ್ಲಿ ಈ ಇಲಾಖೆಯ ಪ್ರತ್ಯೇಕ ಸಿಬ್ಬಂದಿ ವರ್ಗವು ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಧಾರ್ಮಿಕ ದತ್ತಿ

ಉಂಬಳಿ ಜಿಲ್ಲಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಾರೆ. ಹಳೇ ಬೊಂಬಾಯಿ ಪ್ರದೇಶದಲ್ಲಿ ದತ್ತಿ ಆಯುಕ್ತರು ಮುಖ್ಯಸ್ಥರಾಗಿದ್ದು ಅವರಿಗೆ ಸಹಾಯಕ ದತ್ತಿ ಆಯುಕ್ತರು ಮತ್ತು ಸಹಾಯಕ ಸಿಬ್ಬಂದಿ ವರ್ಗದವರು ಸಹಾಯಕರಾಗಿರುತ್ತಾರೆ. ದತ್ತಿ ಆಯುಕ್ತರು ಮತ್ತು ಸಹಾಯಕ ದತ್ತಿ ಆಯುಕ್ತರು ಜುಡಿಷಿಯಲ್ ಅಧಿಕಾರಿಗಳಾಗಿರುತ್ತಾರೆ.

ನಾಲ್ಕು ವಿಭಾಗಗಳಲ್ಲಿರುವ ಧಾರ್ಮಿಕ ಸಂಸ್ಥೆಗಳ ಸಂಖ್ಯೆ ಈ ಕೆಳಕಂಡಂತಿದೆ.

| | | |
|---|---|---|
| 1) ಮೈಸೂರು ವಿಭಾಗ | — | 9,989 |
| 2) ಬೆಂಗಳೂರು ವಿಭಾಗ | — | 10,440 |
| 3) ಬೆಳಗಾಂ ವಿಭಾಗ | — | 12,373 |
| 4) ಗುಲ್ಬರ್ಗಾ ವಿಭಾಗ | — | 10,415 |
| | | 43,217 |

(2) ತಸ್ತೀಕ್ ಭತ್ಯೆ:

1955ನೇ ಇನಾಂ ರದ್ದಿಯಾತಿ ಕಾಯಿದೆ ಹಾಗೂ ಹಲವು ಇನಾಂ ರದ್ದಿಯಾತಿ ಕಾಯಿದೆ 1977ರ ಪ್ರಕಾರ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು ಈ ರೀತಿ ಜಮೀನು ಕಳೆದುಕೊಂಡ ಧಾರ್ಮಿಕ ಸಂಸ್ಥೆಗಳಿಗೆ ಪರಿಹಾರವಾಗಿ ವರ್ಷಂಪ್ರತಿ ತಸ್ತೀಕನ್ನು ನೀಡಲಾಗುತ್ತಿದೆ. ಜಮೀನು ಕಳೆದುಕೊಂಡ ಒಟ್ಟು 30082 ಸಂಸ್ಥೆಗಳಲ್ಲಿ 29834 ಸಂಸ್ಥೆಗಳಿಗೆ ಅಂತಿಮ ತಸ್ತೀಕ ನಿಗಧಿಪಡಿಸಿದ್ದು ಹಕ್ಕು ಪತ್ರಗಳನ್ನು ನೀಡಲಾಗಿದೆ. 284 ಸಂಸ್ಥೆಗಳಿಗೆ ಮಾತ್ರ ತಸ್ತೀಕ ನಿಗಧಿಪಡಿಸಬೇಕಾಗಿರುತ್ತೆ.

(3) ವರ್ಷಾಸನ:

ರಾಜ್ಯದಲ್ಲಿನ ಧಾರ್ಮಿಕ ಸಂಸ್ಥೆಗಳಿಗೆ ಸೇರಿದ ಇನಾಮೇತರ ಜಮೀನುಗಳು ಕರ್ನಾಟಕ ಭೂ ಸುಧಾರಣಾ ಕಾಯಿದೆ 1961ರ ಅನುಸಾರ ಸದರಿ ಕಾಯಿದೆಯಂತೆ ಸರ್ಕಾರದಲ್ಲಿ ವಿಹಿತವಾದ ಜಮೀನುಗಳಿಗೆ ಪರಿಹಾರವಾಗಿ ಅಂತಹ ಜಮೀನುಗಳ ಭೂಕಂದಾಯ ಹಾಗೂ ನೀರಿನ ತೆರಿಗೆಯ ಹತ್ತುಪಟ್ಟು ಮೊತ್ತವನ್ನು ವಾರ್ಷಿಕ ಪರಿಹಾರವಾಗಿ ವರ್ಷಾಸನವೆಂದು ನಿಗಧಿಪಡಿಸಲಾಗಿದೆ.

ವರ್ಷಾಸನವನ್ನು ಒಟ್ಟು 5734 ಸಂಸ್ಥೆಗಳಿಗೆ ನೀಡಬೇಕಾಗಿದ್ದು ಇದರಲ್ಲಿ 4908 ಸಂಸ್ಥೆಗಳಿಗೆ ನೀಡಿರುತ್ತದೆ. ವರ್ಷಾಸನದ ಹಕ್ಕು ಪತ್ರವನ್ನು ನೀಡುವ ಅಧಿಕಾರವನ್ನು ಧಾರ್ಮಿಕ ದತ್ತಿ ಆಯುಕ್ತರು ಹೊಂದಿದ್ದು ಸಂಬಂಧಪಟ್ಟ ವಿಭಾಗಾಧಿಕಾರಿಗಳು ವರ್ಷಾಸನ ಲೆಕ್ಕ ಸಹಾಯಾನುದಾನ ಬಿಡುಗಡೆ ಮಾಡುವರು.

(4) ಸಹಾಯಧನ:

ಈ ಅನುದಾನವನ್ನು ಧಾರ್ಮಿಕ ಸಂಸ್ಥೆಗಳ ವಿನಿಯೋಗಾಧಿಗೋಸ್ಕರ ಸರ್ಕಾರದಿಂದ ನೀಡಲಾಗುತ್ತಿದೆ. 1994-95ನೇ ಸಾಲಿನಲ್ಲಿ ಈ ಶೀರ್ಷಿಕೆಯಲ್ಲಿ ಒಟ್ಟು 19,00,000-00 ರೂಗಳನ್ನು ನೀಡಲಾಗಿದೆ. ಇದರಲ್ಲಿ ಈ ತನಕ 11,05,000-00 ರೂಗಳನ್ನು ಹಲವಾರು ಸಂಸ್ಥೆಗಳಿಗೆ ಮಂಜೂರು ಮಾಡಲಾಗಿದೆ.

COMMUNITY HEALTH CELL
LIBRARY
AND
RB
N95
04137

(5) ಛತ್ರಗಳು:

ಈ ಕೆಳಗಿನ ಛತ್ರಗಳು ಈ ಇಲಾಖೆಯ ನಿಯಂತ್ರಣದಲ್ಲಿದೆ.

1) ಕರ್ನಾಟಕ ರಾಜ್ಯ ಛತ್ರ, ತಿರುಮಲ ತಿರುಪತಿ
2) ಕರ್ನಾಟಕ ರಾಜ್ಯ ಛತ್ರ, ಮಂತ್ರಾಲಯ
3) ಕರ್ನಾಟಕ ರಾಜ್ಯ ಛತ್ರ, ಶ್ರೀ ಶೈಲಂ
4) ಕರ್ನಾಟಕ ರಾಜ್ಯ ಛತ್ರ, ವಾರಣಾಸಿ

ಕರ್ನಾಟಕ ರಾಜ್ಯದಿಂದ ಬರುವ ಯಾತ್ರಾರ್ಥಿಗಳಿಗೆ ಛತ್ರದಲ್ಲಿ ವಸತಿ ಸೌಕರ್ಯಗಳನ್ನು ನೀಡಲಾಗುತ್ತಿದೆ. ಕರ್ನಾಟಕ ರಾಜ್ಯದ ಛತ್ರಗಳನ್ನು ಮಹಾರಾಷ್ಟ್ರದ ತುಳಜಾ ಪುರದ ಕೇರಳದ ಮಧೂರಿನಲ್ಲಿಯೂ ಕಟ್ಟಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ತುಳಜಾಪುರದಲ್ಲಿ ಈಗಾಗಲೇ ಜಮೀನನ್ನು ಕೊಳ್ಳಲಾಗಿದೆ. ಕೇರಳ ರಾಜ್ಯದ ಮಧೂರಿನಲ್ಲಿ ನಿರ್ಮಾಣದ ಕಾರ್ಯ ಪ್ರಗತಿಯಲ್ಲಿದೆ. ಹರಿದ್ವಾರದಲ್ಲಿರುವ ಕರ್ನಾಟಕ ಧರ್ಮಶಾಲ ಸೊಸೈಟಿಯ ಛತ್ರಕ್ಕೆ ಸರ್ಕಾರವು ರೂ.3.00 ಲಕ್ಷಗಳ ಧನ ಸಹಾಯ ನೀಡಿದೆ.

(6) ಶೈಕ್ಷಣಿಕ ಸಂಸ್ಥೆಗಳು:

ಈ ಇಲಾಖೆಯ ನಿಯಂತ್ರಣದಲ್ಲಿ ಮಹಾರಾಜ ಸಂಸ್ಕೃತ ಕಾಲೇಜ (ಆಗಮ ವಿಭಾಗ), ಮೈಸೂರು ಮತ್ತು ಸಂಸ್ಕೃತ ಕಾಲೇಜು, ಮೇಲುಕೋಟೆ ಇವುಗಳು ಇರುತ್ತವೆ.

(7) ವಿಶೇಷ ಸಂಸ್ಥೆಗಳು:

ಈ ಕೆಳಗಿನ ಕೆಲವು ಸಂಸ್ಥೆಗಳ ಆಡಳಿತವು ಆಯಾಯಾ ಸಂಸ್ಥೆಗಳಿಗೆ ಸಂಬಂಧಿಸಿದಂತೆ ವಿಶೇಷ ನಿಯಮಗಳ ಪ್ರಕಾರ ನಡೆಸಲ್ಪಡುತ್ತಿದೆ.

1) ಮೇಲುಕೋಟೆ ಮುಜರಾಯಿ ದೇವಸ್ಥಾನಗಳು
2) ಶ್ರೀ ರೇಣುಕಾ ಎಲ್ಲಮ್ಮ ದೇವಸ್ಥಾನ, ಸವದತ್ತಿ
3) ಶ್ರೀ ಸಿದ್ಧಲಿಂಗೇಶ್ವರ ದೇವಸ್ಥಾನ, ಯಡಿಯೂರು
4) ಶ್ರೀ ಎಸ್.ಡಿ.ಜೆ.ಎಂ.ಇನ್ಸ್‌ಟಿಟ್ಯೂಷನ್, ಶ್ರವಣ ಬೆಳಗೊಳ
5) ಅರಮನೆ ಮುಜರಾಯಿ ಸಂಸ್ಥೆಗಳು, ಮೈಸೂರು
6) ಶ್ರೀ ಮಲೈ ಮಹದೇಶ್ವರ ಸ್ವಾಮಿ ದೇವಸ್ಥಾನ, ಕೊಳ್ಳೇಗಾಲ ತಾಲೂಕು
7) ಶ್ರೀ ಗುರುತಿಪ್ಪೇಸ್ವಾಮಿ ಮುಜರಾಯಿ ಸಂಸ್ಥೆ
8) ಶ್ರೀ ದತ್ತಗಾಂಗಾಪುರ ದೇವಸ್ಥಾನ, ಗಂಗಾಪುರ ವ್ಯಾಪ್ತಿ.

ಈ ಕೆಳಗಿನ ಕೆಲವು ಧರ್ಮಸಂಸ್ಥೆಗಳು ಮುಜರಾಯಿ ಆಡಳಿತವು ಆಯಾಯಾ ಸಂಸ್ಥೆಗಳಿಗೆ ಸಂಬಂಧಿಸಿದಂತೆ ವಿಶೇಷ ನಿಯಮಗಳ ಪ್ರಕಾರ ನಡೆಸುತ್ತಿವೆ.

1) ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಧರ್ಮಸಂಸ್ಥೆ, ಬೆಂಗಳೂರು
2) ಶ್ರೀ ಕೆ.ಪಿ.ಪುಟ್ಟಣಚೆಟ್ಟಿ ಧರ್ಮ ಸಂಸ್ಥೆ, ಬೆಂಗಳೂರು

## (8) ರಿಪೇರಿ ಜೀರ್ಣೋದ್ಧಾರ ಅನುದಾನ:

1994–95ನೇ ಸಾಲಿನಲ್ಲಿ ಒಟ್ಟು ರೂ. 1,26,00,000–00 (ರೂ.ಒಂದು ಕೋಟಿ ಇಪ್ಪತ್ತಾರು ಲಕ್ಷ ಮಾತ್ರ) ಗಳನ್ನು ಮುಜರಾಯಿ ಹಾಗೂ ಮುಜರಾಯೇತರ ಸಂಸ್ಥೆಗಳ ರಿಪೇರಿ ಹಾಗೂ ಜೀರ್ಣೋದ್ಧಾರಕ್ಕಾಗಿ ಒದಗಿಸಲಾಗಿದೆ. ಆದರಲ್ಲಿ ರೂ.30,75,000–00ರೂಗಳಿಗೆ ಮಂಜೂರಾತಿ ನೀಡಲಾಗಿದೆ ಹಾಗೂ 50.00 ಲಕ್ಷ ರೂಗಳು ಬಿಡುಗಡೆ ಹಂತದಲ್ಲಿದೆ. ನಿರ್ಮಾಣಕ್ಕಾಗಿ ಒಟ್ಟು ರೂ. 1.05 ಕೋಟಿಗಳನ್ನು ಸರ್ಕಾರದಿಂದ ನಿಗದಿಪಡಿಸಿದೆ. ಇದುವರೆವಿಗೂ ರೂ.30.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು ಮತ್ತು 50.00 ಲಕ್ಷ ರೂಗಳು ಬಿಡುಗಡೆ ಹಂತದಲ್ಲಿದೆ.

## (9) ಆರಾಧನಾ ಯೋಜನೆ:

1991–92ನೇ ಸಾಲಿನಲ್ಲಿ ಸರ್ಕಾರವು ಹೊಸದಾಗಿ ಆರಾಧನಾ ಯೋಜನೆಯನ್ನು ಪ್ರಾರಂಭಿಸಿದ್ದು ಈ ಯೋಜನೆಯಡಿಯಲ್ಲಿ ಹರಿಜನ ಕೇರಿ, ವಡ್ಡರ ಕೇರಿ ಮತ್ತು ಲಂಬಾಣಿ ತಾಂಡಗಳು ಹಾಗೂ ಹಿಂದುಳಿದ ಸಮುದಾಯ ಜನರು ವಾಸಿಸುವ ಸ್ಥಳಗಳಲ್ಲಿ ಪೂಜಾಮಂದಿರ ಭಜನಾ ಮಂದಿರ ಮತ್ತು ಪ್ರಾರ್ಥನಾ ಮಂದಿರ ಕಟ್ಟಲು ಧನಸಹಾಯವನ್ನು ನೀಡಲಾಗಿದೆ. 1993–94ನೇ ಸಾಲಿನಲ್ಲಿ ಈ ಯೋಜನೆಯ ಪ್ರಯೋಜನವನ್ನು ಅಲ್ಪಸಂಖ್ಯಾತ ಕೋಮುಗಳಾದ ಮುಸ್ಲಿಂ, ಸಿಖ್ಖರು, ಪಾರ್ಸಿ, ಕ್ರಿಶ್ಚಿಯನ, ಜೈನ,ಬೌದ್ಧ, ಆಂಗ್ಲೋ ಇಂಡಿಯನ ಇವರುಗಳಿಗೆ ವಿಸ್ತರಿಸಿ ಸರ್ಕಾರವು ಆದೇಶ ಹೊರಡಿಸಿದೆ.

1994–95ನೇ ಆಯವ್ಯಯದಲ್ಲಿ ಈ ಯೋಜನೆ ಲಿ ಒಟ್ಟು ರೂ.10.00 ಕೋಟಿಗಳನ್ನು ನಿಗದಿಪಡಿಸಿದ್ದು ಈಗಾಗಲೇ ರೂ.4,27,25,000–00 ಬಿಡುಗಡೆ ಮಾಡಲಾಗಿದೆ. ಈ ಯೋಜನೆ ಪ್ರಾರಂಭವಾದಂದಿನಿಂದ ಇಲ್ಲಿಯವರೆಗೆ 4493 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು ಅವುಗಳಲ್ಲಿ 2586 ಕಾಮಗಾರಿಗಳು ಪೂರ್ಣಗೊಂಡಿದ್ದು ಉಳಿದ 1907 ಕಾಮಗಾರಿ ವಿವಿಧ ರೀತಿಯ ಪ್ರಗತಿ ಹಂತದಲ್ಲಿದೆ.

## 10) ಪಬ್ಲಿಕ ಟ್ರಸ್ಟು:

ದಿ ಬಾಂಬೆ ಪಬ್ಲಿಕ ಟ್ರಸ್ಟ ಕಾಯಿದೆ, 1950,ಬೆಳಗಾವಿ, ಧಾರವಾಡ,ಬಿಜಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಗಳ ವ್ಯಾಪ್ತಿಗೆ ಅನ್ವಯಿಸುತ್ತದೆ. ಈ ಕಾಯಿದೆಯ ಮುಖ್ಯ ಉದ್ದೇಶವು ಪಬ್ಲಿಕ ಟ್ರಸ್ಟಗಳ ಆಡಳಿತವನ್ನು ನಿಯಂತ್ರಿಸುವುದು. ಎಲ್ಲಾ ಧಾರ್ಮಿಕ ಮತ್ತು ಧರ್ಮ ಸಂಸ್ಥೆಗಳು ಈ ಕಾಯಿದೆಯಡಿ ಬರುತ್ತವೆ. ಎಲ್ಲಾ ಪಬ್ಲಿಕ ಟ್ರಸ್ಟಗಳನ್ನು ನೋಂದಾಯಿಸಬೇಕು. ಪಬ್ಲಿಕ ಟ್ರಸ್ಟಗಳು ತಮ್ಮ ಸಂಸ್ಥೆಯ ಶೇಕಡ 6ರ ವರಮಾನವನ್ನು ಸರ್ಕಾರಕ್ಕೆ ನೀಡಬೇಕು. ಶೈಕ್ಷಣಿಕ ಮತ್ತು ಇತರೆ ಕೆಲವು ಟ್ರಸ್ಟಗಳಿಗೆ ವಿನಾಯ್ತಿ ನೀಡಿದೆ.

ವರಮಾನವನ್ನು ಪಬ್ಲಿಕ್ ಟ್ರಸ್ಟ್‌ಗಳ ಆಡಳಿತ ನಿಧಿಗೆ ಜಮಾ ಮಾಡಲಾಗುವುದು. ಈ ನಿಧಿಯ ನಿರ್ವಹಣೆಯನ್ನು ದತ್ತಿ ಆಯುಕ್ತರು ನೋಡಿಕೊಳ್ಳುವರು. ಕಾಯಿದೆಯ ಅನುಸಾರ ಪಬ್ಲಿಕ್ ಟ್ರಸ್ಟ್‌ಗಳ ಆಡಳಿತ ನಿರ್ವಹಣೆಯ ಜೊತೆಗೆ ದತ್ತಿ ಆಯುಕ್ತರು ನ್ಯಾಯಾಂಗ ತನಿಖೆಗಳನ್ನು ಸಹಾ ನಡೆಸುವರು.

## 12. ಸೇವೆಗಳು

### 1) ಮಾಶಾಸನ ಯೋಜನೆಗಳು:

ನಿರ್ಗತಿಕ ವಯೋವೃದ್ಧರು ಮತ್ತು ಆರ್ಥಿಕವಾಗಿ ಹಿಂದುಳಿದ ಅಂಗವಿಕಲರುಗಳಿಗೆ ಮಾಹೆಯಾನ ರೂ.75 ಮತ್ತು ನಿರ್ಗತಿಕ ವಿಧವೆಯರಿಗೆ ಮಾಹೆಯಾನ ರೂ.50 ಗಳ ಮಾಶಾಸನವನ್ನು ನೀಡಲಾಗುತ್ತಿದೆ. 1993–94ನೇ ಸಾಲಿಗೆ ಇರುವ ಮಾಶಾಸನ ಪ್ರಕರಣಗಳು ಕೆಳಕಂಡಂತೆ ಇವೆ:

| ಕ್ರಮ ಸಂಖ್ಯೆ | ವಿವರ | ಫಲಾನುಭವಿಗಳು | ಮಾಶಾಸನ ಮೊತ್ತ |
|---|---|---|---|
| 1) | ವಯೋವೃದ್ಧರ ಮಾಶಾಸನ | 4,94,915 | 35,29,76,750 |
| 2) | ವಿಧವೆಯರ ಮಾಶಾಸನ | 4,81,006 | 23,36,36,343 |
| 3) | ಅಂಗವಿಕಲರುಗಳ ಮಾಶಾಸನ | 2,80,070 | 15,30,71,365 |

### 2) ವೃಂದಬಲ:

ಕಂದಾಯ ಇಲಾಖೆಯಲ್ಲಿರುವ ವೃಂದ ಬಲವು ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ವಿವರ | ವೃಂದ ಬಲ | ಖಾಯಂ ಹುದ್ದೆಗಳು | ತಾತ್ಕಾಲಿಕ ಹುದ್ದೆಗಳು | ನಿಯೋಜಿತ ಕಾದಿರಿಸಿದ ಹುದ್ದೆಗಳು |
|---|---|---|---|---|---|
| 1) | ತಹಶೀಲ್ದಾರರು ಗ್ರೂಪ್ 'ಎ' | 221 | 218 | — | 3 |
| 2) | ತಹಶೀಲ್ದಾರರು ಗ್ರೂಪ್ 'ಬಿ' | 216 | 48 | 38 | 130 |
| 3) | ಶಿರಸ್ತೇದಾರರು ಡೆಪ್ಯೂಟಿ ತಹಶೀಲ್ದಾರರು | 1331 | — | — | — |
| 4) | ರೆವಿನ್ಯೂ ಇನ್ಸ್‌ಪೆಕ್ಟರ್ಸ್ | 1141 | 766 | 395 | — |
| 5) | ಪ್ರಥಮ ದರ್ಜೆ ಸಹಾಯಕ | 1192 | 961 | 231 | — |
| 6) | ಗ್ರಾಮಲೆಕ್ಕಾಧಿಕಾರಿಗಳು | 9213 | 8941 | 272 | — |

ರಾಜ್ಯಾದ್ಯಂತ 600 ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳು ಖಾಲಿ ಇರುತ್ತವೆ. ಸರ್ಕಾರಿ ಆದೇಶ ಸಂಖ್ಯೆ :ಆರ್‌ಡಿ 119 ಎಲ್‌ಎಸ್ 93 ದಿನಾಂಕ 6-8-93ರಲ್ಲಿ ಜಿಲ್ಲಾ ನೇಮಕಾತಿಯ ಸಮಿತಿಯ ಮೂಲಕ ಖಾಲಿ ಹುದ್ದೆಗಳನ್ನು ತುಂಬಲು ಅನುಮತಿ ನೀಡಿದೆ. ಹಾಗೂ ಸಮಿತಿಯನ್ನು ಪುನರ್ ರಚಿಸಲಾಗುತ್ತಿದೆ.

ದಿನಾಂಕ 31-12-1994ಕ್ಕೆ ಕೆಳಕಂಡ ಇಲಾಖಾ ವಿಚಾರಣಾ ಪ್ರಕರಣಗಳು ಬಾಕಿ ಇರುತ್ತವೆ. ಅಮಾನತ್ತಿನ ವಿಚಾರಣೆಗೆ ಬಾಕಿ ಇರುವ ಪ್ರಕರಣಗಳ ವಿವರಗಳು.

| ಕ್ರಮ ಸಂಖ್ಯೆ | ವಿವರಗಳು | | ಅಮಾನತ್ತು | ಬಾಕಿ ವಿಚಾರಣೆ |
|---|---|---|---|---|
| 1) | ತಹಸೀಲ್ದಾರರು ಮತ್ತು ಡೆಪ್ಯುಟಿ ತಹಸೀಲ್ದಾರರು ಮತ್ತು ಇತರರು | 8 | ಗ್ರೂಪ್-ಎ – 2<br>ಗ್ರೂಪ್-ಬಿ – 3<br>ಗ್ರೂಪ್-ಸಿ – 3 | 247 |
| 2) | ಗ್ರೂಪ್ 'ಸಿ' ಹುದ್ದೆಗಳು | 135 | | 695 |

3) <u>ನಾಡ ಕಚೇರಿಗಳು:</u>

ಹೋಬಳಿ ಮಟ್ಟದಲ್ಲಿ ಕಂದಾಯ ಇಲಾಖೆಯ ಆಡಳಿತವನ್ನು ಬಲಪಡಿಸಲು ನಾಡ ಕಚೇರಿಗಳನ್ನು ತೆರೆಯಲಾಗಿದೆ. ರಾಜ್ಯಾದ್ಯಂತ 329 ನಾಡ ಕಚೇರಿಗಳಿರುತ್ತವೆ. ಬಹಳಷ್ಟು ಅಧಿಕಾರವನ್ನು ನಾಡ ಕಚೇರಿಗಳಿಗೆ ಕೆಳಕಂಡ ಆದೇಶಗಳನ್ವಯ ವಿಕೇಂದ್ರೀಕರಣ ಗೊಳಿಸಲಾಗಿದೆ.

1) ಸರ್ಕಾರಿ ಆದೇಶ ಸಂಖ್ಯೆ :ಆರ್‌ಡಿ 93 ಎಲ್‌ಎಸ್‌ಡಿ 86(ಭಾಗ)
   ದಿನಾಂಕ 15-10-1986
2) ಸರ್ಕಾರಿ ಆದೇಶ ಸಂಖ್ಯೆ :ಆರ್‌ಡಿ 93 ಎಲ್‌ಎಸ್‌ಡಿ 86(ಭಾಗ-3)
   ದಿನಾಂಕ 20-1-87
3) ಸರ್ಕಾರಿ ಆದೇಶ ಸಂಖ್ಯೆ :ಎಸ್‌ಡಬ್ಲ್ಯುಎಲ್ 27 ಎಎಸ್ 86
   ದಿನಾಂಕ 16-10-86

ಇನ್ನೂ ಹೆಚ್ಚಿನ ಅಧಿಕಾರವನ್ನು ನಾಡ ಕಚೇರಿಗಾಗಿ ವಿಕೇಂದ್ರೀಕರಣಗೊಳಿಸಲು ಪ್ರಸ್ತಾಪಿಸಲಾಗಿದೆ.

4) <u>ಮಿನಿ ವಿಧಾನ ಸೌಧ:</u>

ಗ್ರಾಮಾಂತರ ಜನರುಗಳ ದೃಷ್ಟಿಯಿಂದ ಪ್ರತಿ ತಾಲ್ಲೂಕಿನಲ್ಲಿ ಒಂದು ಮಿನಿ ವಿಧಾನ ಸೌಧವನ್ನು ಕಟ್ಟಲು 1988ರಲ್ಲಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಇದುವರೆವಿಗೂ 51 ತಾಲ್ಲೂಕುಗಳಿಗೆ ಮಂಜೂರಾತಿ ನೀಡಲಾಗಿದ್ದು, 4 ಕಾಮಗಾರಿಗಳನ್ನು ಪೂರೈಸಲಾಗಿದೆ.

5) <u>ಮಾಜಿ ಗ್ರಾಮ ನೌಕರರುಗಳು</u>

ಕರ್ನಾಟಕ ಗ್ರಾಮ ನೌಕರಿ ರದ್ದಿಯಾತಿ ಕಾಯಿದೆ 1961ನ್ನು ಜಾರಿಗೆ ತಂದ ನಂತರ ಆನುವಂಶಿಕ ಹುದ್ದೆಗಳಾದ ಶಾನುಭೋಗ, ಪಟೇಲ ಮತ್ತು ಗ್ರಾಮಗಳ ಸೌಮ್ಯದ

ನೌಕರರ ಹುದ್ದೆಗಳನ್ನು ರದ್ದುಪಡಿಸಲಾಗಿದೆ. 2333 ಮಾಜಿ ಶಾನುಭೋಗರು, 5973 ಮಾಜಿ ಪಟೇಲರು ಮತ್ತು 14,027 ಮಾಜಿ ಕೆಳವರ್ಗದ ಗ್ರಾಮ ನೌಕರರು ಗಳಿದ್ದು, ಇವರುಗಳಿಗೆ ಕ್ರಮವಾಗಿ ತಲಾ ರೂ. 500, 100 ಮತ್ತು 75 ಗಳನ್ನು ಮಾಸಿಕ ಅನುಕಂಪ ಭತ್ಯೆ ರೂಪದಲ್ಲಿ ನೀಡಲಾಗುತ್ತದೆ. 1994–95ರ ಆಯವ್ಯಯದಲ್ಲಿ ಈ ವೆಚ್ಚಕ್ಕಾಗಿ ಕ್ರಮವಾಗಿ ರೂ. 325, 358.38 ಮತ್ತು 125.00 ಲಕ್ಷಗಳನ್ನು ಒದಗಿಸಿಕೊಳ್ಳಲಾಗಿದೆ.

## 13. <u>ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ</u>

ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ ಕಾಯಿದೆ 1976ರ ಅಡಿಯಲ್ಲಿ ಈ ಹಿಂದೆ ಇದ್ದ ಮೂರು ನ್ಯಾಯಾಧಿಕರಣಗಳಾದ (1) ಕರ್ನಾಟಕ ಭೂ ಕಂದಾಯ ಮೇಲ್ಮನವಿ ನ್ಯಾಯಾಧಿಕರಣ (2) ಕರ್ನಾಟಕ ವಾಣಿಜ್ಯ ತೆರಿಗೆ ಮೇಲ್ಮನವಿ ನ್ಯಾಯಾಧಿಕರಣ ಮತ್ತು (3) ಕರ್ನಾಟಕ ಸಹಕಾರ ಸಂಘಗಳ ಮೇಲ್ಮನವಿ ನ್ಯಾಯಾಧಿಕರಣಗಳನ್ನು ಒಟ್ಟುಗೂಡಿಸಿ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣವನ್ನು ರಚಿಸಲಾಗಿದೆ.

ರಚಿಸಿರುವ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣವು 1994–95ರಲ್ಲಿ ಕೆಳಕಂಡಂತೆ 9 ಬೆಂಚುಗಳನ್ನು ಹೊಂದಿದೆ.

1) ಭೂ ಕಂದಾಯ ಬೆಂಚುಗಳು — 3
2) ವಾಣಿಜ್ಯ ತೆರಿಗೆ ಬೆಂಚುಗಳು — 4
3) ಸಹಕಾರ ಸಂಘಗಳ ಬೆಂಚುಗಳು — 2

ಪ್ರತಿಯೊಂದು ಬೆಂಚುಗಳಲ್ಲಿ ಇಲಾಖೆಗೆ ಸಂಬಂಧಿಸಿದ ಒಬ್ಬ ಅಧಿಕಾರಿ ಸದಸ್ಯ ಅಥವಾ ಐ.ಎ.ಎಸ್. ಅಧಿಕಾರಿ ಹಾಗೂ ಒಬ್ಬ ಜಿಲ್ಲಾ ನ್ಯಾಯಾಂಗದ ಅಧಿಕಾರಿ ಸದಸ್ಯರಾಗಿರುತ್ತಾರೆ. ನ್ಯಾಯಾಧಿಕರಣದಲ್ಲಿ ಅಧ್ಯಕ್ಷರನ್ನೊಳಗೊಂಡಂತೆ 3 ಜನ ಐ.ಎ.ಎಸ್. ಅಧಿಕಾರಿಗಳು, 9 ಜನ ಜಿಲ್ಲಾ ನ್ಯಾಯಾಂಗ ಅಧಿಕಾರಿಗಳು, 4 ಜನ ವಾಣಿಜ್ಯ ತೆರಿಗೆಯ ಹೆಚ್ಚುವರಿ ಆಯುಕ್ತರು ಮತ್ತು 2 ಸಹಕಾರ ಇಲಾಖೆಯ ಹೆಚ್ಚುವರಿ ನಿಬಂಧಕರು ಇರುತ್ತಾರೆ.

ನ್ಯಾಯಾಧಿಕರಣದ ಅಧ್ಯಕ್ಷರು ನಗರ ಭೂಪರಿಮಿತಿ ಕಾಯಿದೆ ಅಡಿಯಲ್ಲಿ ಮೇಲ್ಮನವಿ ಇತ್ಯರ್ಥಗೊಳಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಪ್ರಾಧಿಕಾರಕ್ಕೆ ಮೂಲಭೂತವಾಗಿ ಬೆಂಗಳೂರು ಕೇಂದ್ರಸ್ಥಾನ ಆಗಿದ್ದರೂ ಸಹ ವಿಭಾಗ ಮಟ್ಟಗಳಲ್ಲಿ ವಿಚಾರಣೆ ನಡೆಸಿ, ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗುತ್ತದೆ.

1993–94 (ದಿನಾಂಕ 1–4–93 ರಿಂದ 31–12–93)ರಲ್ಲಿ ಪ್ರಕರಣಗಳನ್ನು ಇತ್ಯರ್ಥಗೊಳಿಸಿರುವ ಅಂಕಿಅಂಶಗಳು ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ವಿಭಾಗ | ಬಾಕಿ ಇರುವ ಪ್ರಕರಣಗಳು | ಸೇರ್ಪಡೆಯಾದ ಹೊಸ ಪ್ರಕರಣಗಳು | ಒಟ್ಟು | ವಿಲೇವಾರಿ ಪ್ರಕರಣಗಳು | ಬಾಕಿ ಇರುವ ಪ್ರಕರಣಗಳು |
|---|---|---|---|---|---|---|
| 1. | ಭೂ ಕಂದಾಯ | 1328 | 67 | 1395 | 117 | 1278 |
| 2. | ಸಹಕಾರ | 1046 | 67 | 1113 | 46 | 1067 |
| 3. | ವಾಣಿಜ್ಯ ತೆರಿಗೆ | 2585 | 125 | 2710 | 226 | 2484 |
| 4. | ನಗರ ಭೂಪರಿಮಿತಿ | 16 | 2 | 18 | 3 | 15 |

## 14. ಪುನರ ವಸತಿ

### 1) ಯೋಜನೆಗಳಿಂದ ಸ್ಥಳಾಂತರಿತ ಕುಟುಂಬಗಳ ಪುನರ ವಸತಿ:

ಯೋಜನೆಗಳಿಂದ ಸ್ಥಳಾಂತರಗೊಂಡ ಕುಟುಂಬಗಳಿಗೆ ಮೂಲ ಸೌಲಭ್ಯಗಳನ್ನು ಒಳಗೊಂಡಂತೆ ವಸತಿ ಸೌಕರ್ಯ ಕಲ್ಪಿಸಿ ಕೊಡಲಾಗುತ್ತಿದೆ. ಯೋಜನೆಗಳನ್ನು ಒಳಗೊಂಡ ಜಿಲ್ಲೆಗಳಲ್ಲಿ ಸಂಬಂಧಪಟ್ಟ ಜಿಲ್ಲಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಪುನರ ವಸತಿ ಸಮಿತಿಗಳನ್ನು ಪುನರ ರಚಿಸಲಾಗುತ್ತಿದೆ. 1987ರಲ್ಲಿ ಪ್ರಸ್ತಾಪಿಸಿದ್ದ ಯೋಜನೆಗಳಿಂದ ಸ್ಥಳಾಂತರಿಸಿದ ವ್ಯಕ್ತಿಗಳ ಪುನರ ವ್ಯವಸ್ಥೆ ಕಾಯಿದೆ1994ರಲ್ಲಿ ರಾಷ್ಟ್ರಾಧ್ಯಕ್ಷರ ಒಪ್ಪಿಗೆ ಪಡೆಯಲಾಗಿದೆ. ಬಹು ಮುಖ್ಯವಾದ ಯೋಜನೆಯಿಂದ ಸ್ಥಳಾಂತರಗೊಂಡು ಪುನರ ವಸತಿ ಕಲ್ಪಿಸಿರುವ ಕೇಂದ್ರಗಳು ಕೆಳಕಂಡಂತೆ ಇರುತ್ತದೆ.

1) ಕೃಷ್ಣಾ ಮೇಲ್ದಂಡೆ ಯೋಜನೆ
2) ಹೇಮಾವತಿ ಯೋಜನೆ
3) ಯಗಚಿ ಯೋಜನೆ
4) ಸುಫಾ ಯೋಜನೆ
5) ಕಾಳಿ ಯೋಜನೆ
6) ಅಮ್ರಜಾ ಯೋಜನೆ
7) ಕಾರಂಜಾ ಯೋಜನೆ
8) ಕೊಂಕಣ ರೈಲ್ವೆ ಯೋಜನೆ
9) ಸೀ–ಬರ್ಡ್ ಯೋಜನೆ
10) ಚಕ್ರವರಾಹಿ ಮತ್ತು ಸಾವೆಹಕ್ಲು ಯೋಜನೆ
11) ಘಟಪ್ರಭ ಮತ್ತು ಮಲಪ್ರಭ ಯೋಜನೆ

### 2) ಕೂಡಲ ಸಂಗಮ ಕೇಂದ್ರದ ಅಭಿವೃದ್ಧಿ:

ಬಿಜಾಪುರ ಜಿಲ್ಲೆಯಲ್ಲಿ ಹೆಸರುವಾಸಿಯಾಗಿರುವ ಕೂಡಲಸಂಗಮ ಪ್ರವಾಸಿ ಕೇಂದ್ರವನ್ನು ಅಭಿವೃದ್ಧಿಗೊಳಿಸಲು ಉದ್ದೇಶಿಸಲಾಗಿದೆ. ಈ ಕೇಂದ್ರವು ಅಂತರ ರಾಷ್ಟ್ರೀಯ ಪ್ರವಾಸಿಗರ ಗಮನವನ್ನು ಸೆಳೆದಿರುತ್ತದೆ. ಈ ಕೇಂದ್ರವನ್ನು ಸಾಂಸ್ಕೃತಿಕ ಮತ್ತು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸಿ ನಿರ್ವಹಣೆ ನಡೆಸಲು ಕೂಡಲ ಸಂಗಮ ಅಭಿವೃದ್ಧಿ ಕಾಯಿದೆ 1994ನ್ನು ರೂಪಿಸಲಾಗಿದೆ.

## 15. ಸಾರ್ವಜನಿಕ ಕುಂದುಕೊರತೆಗಳು

ವಿಶೇಷ ಕೋಶದ ವಿಶೇಷಾಧಿಕಾರಿಯು, ಕಂದಾಯ ಇಲಾಖೆಯ ಸಾರ್ವಜನಿಕ ದೂರು ವಿಚಾರಣಾಧಿಕಾರಿಯಾಗಿ ನೇಮಿಸಲ್ಪಟ್ಟಿದ್ದಾರೆ. 1994ನೇ ಸಾಲಿನಲ್ಲಿ 159 ಹೊಸ ಪ್ರಕರಣಗಳನ್ನು ನೊಂದಾಯಿಸಿದ್ದು ಕಳೆದ ವರ್ಷದಲ್ಲಿ ಬಾಕಿ ಇದ್ದ 131 ಪ್ರಕರಣಗಳು ವಿಲೇವಾರಿಯಾಗಿ 67 ಪ್ರಕರಣಗಳು ಬಾಕಿ ಉಳಿದಿದ್ದು ಅಧೀನ ಕಚೇರಿಗಳಾದ ವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳಲ್ಲಿ ವಿವಿಧ ಹಂತಗಳಲ್ಲಿ ಪರಿಶೀಲನೆಯಲ್ಲಿದೆ. ಸಾರ್ವಜನಿಕ ದೂರು ವಿಚಾರಣೆ ಪ್ರಕರಣಗಳ ಬಗ್ಗೆ ತ್ರೈಮಾಸಿಕ ಸಮೀಕ್ಷೆ ಮಾಡುತ್ತಿದ್ದು ಪ್ರಕರಣಗಳನ್ನು ಅಗತ್ಯತೆ ಮೇರೆಗೆ ವಿಲೇ ಮಾಡಲು ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ.

ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು, ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರರು ಸಾರ್ವಜನಿಕ ಕುಂದುಕೊರತೆಗಳ ವಿಚಾರಣಾಧಿಕಾರಿಗಳಾಗಿರುತ್ತಾರೆ. ಸರ್ಕಾರವು ಸಾರ್ವಜನಿಕರ ಕುಂದುಕೊರತೆಗಳನ್ನು ನಿವಾರಿಸಲು ಸಾಕಷ್ಟು ಪ್ರಾಮುಖ್ಯತೆಯನ್ನು ನೀಡಿರುತ್ತದೆ. ಸಾರ್ವಜನಿಕರ ಕುಂದುಕೊರತೆಗಳನ್ನು ನಿವಾರಿಸಲು ಜಿಲ್ಲಾಧಿಕಾರಿಗಳು ತಮ್ಮ ವ್ಯಾಪ್ತಿಯ ಪ್ರತಿ ತಾಲ್ಲೂಕಿನಲ್ಲಿ ಪ್ರತಿ ಮಾಹೆಯಲ್ಲಿ ಕನಿಷ್ಠ ಒಂದು ದಿವಸದ ಪೂರ್ಣ ಅವಧಿಯನ್ನು ನಿಗದಿಪಡಿಸಿ ಕೆಲಸ ನಿರ್ವಹಿಸಲು ಹಾಗೂ ಇದೇ ರೀತಿ ತಹಶೀಲ್ದಾರರು ಪ್ರತಿ ಹೋಬಳಿಯಲ್ಲಿ ಕೆಲಸ ನಿರ್ವಹಿಸಲು ನಿರ್ದೇಶಿಸಲಾಗಿದೆ.

## 16. ವಿಶೇಷ ಕೋಶ

ಕಂದಾಯ ಇಲಾಖೆಯ ವಿಶೇಷ ಕೋಶವನ್ನು ಸರ್ಕಾರದ ಆಡಳಿತಾತ್ಮಕ ಅಂಗಗಳಾದ ಕಂದಾಯ, ಭೂದಾಖಲೆಗಳು ಮತ್ತು ಭೂಮಾಪನ ವ್ಯವಸ್ಥೆ, ನೋಂದಣಿ ಹಾಗೂ ಧಾರ್ಮಿಕ ದತ್ತಿ ಇಲಾಖೆಗಳ ಕ್ಷೇತ್ರ ಕಾರ್ಯಾಲಯಗಳ ವಿವಿಧ ಹಂತಗಳಲ್ಲಿ ನಡೆಯುವ ಅವ್ಯವಹಾರ, ಭ್ರಷ್ಟಾಚಾರ, ಕಾನೂನು ಬಾಹಿರ ನ್ಯೂನತೆಗಳನ್ನು ತಡೆಗಟ್ಟಲು 1986ರಲ್ಲಿ ಸೃಜಿಸಲಾಗಿದೆ.

ಈ ಕೋಶವು, ಕಾನೂನು ಬಾಹಿರ ಮತ್ತು ಸಾರ್ವಜನಿಕ ಕೆಲಸ ಕಾರ್ಯಗಳಲ್ಲಿ ವಿಳಂಬನೆ ಮತ್ತು ಕಿರುಕುಳದ ಪ್ರಕರಣಗಳನ್ನು ಪತ್ತೆ ಹಚ್ಚಿ ತಪ್ಪಿತಸ್ಥ ಅಧಿಕಾರಿಗಳ :ನೌಕರರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳುವವರ ಬಗ್ಗೆ ಸಲಹೆಗಳನ್ನು ನೀಡುವ ಅಧಿಕಾರ ಹೊಂದಿರುತ್ತದೆ. ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಉಪಕಾರ್ಯದರ್ಶಿಯು ವಿಶೇಷ ಕೋಶದ ಮುಖ್ಯಸ್ಥರಾಗಿರುತ್ತಾರೆ. 1994ನೇ ಸಾಲಿನಲ್ಲಿ ಕೋಶವು ಹೊಸದಾಗಿ 37 ಪ್ರಕರಣಗಳನ್ನು ನೊಂದಾಯಿಸಿದ್ದು, ಹಿಂದಿನ ವರ್ಷದ 80 ಪ್ರಕರಣಗಳೂ ಸೇರಿದಂತೆ, 117 ಪ್ರಕರಣಗಳು ಸ್ವೀಕರಿಸಿದ್ದು ಅವುಗಳಲ್ಲಿ 61 ಪ್ರಕರಣಗಳು ವಿಲೇವಾರಿಯಾಗಿದೆ, 56 ಪ್ರಕರಣಗಳು ಬಾಕಿ ಉಳಿದಿರುತ್ತದೆ. ಈ ಬಾಕಿ ಇರುವ ಪ್ರಕರಣಗಳ ವಿಚಾರಣೆಯು ವಿವಿಧ ಹಂತಗಳಲ್ಲಿ ಬಾಕಿ ಇದೆ. ಇದಲ್ಲದೇ, ವಿಶೇಷ ಕೋಶವು, ಜಿಲ್ಲಾ ನೋಂದಣಾಧಿಕಾರಿಗಳ ಉಪನೋಂದಣಾಧಿಕಾರಿಗಳ ಹಾಗೂ ಉಪವಿಭಾಗಾಧಿಕಾರಿಗಳ ಕಾರ್ಯಾಲಯದ ಅನಿರೀಕ್ಷಿತ ತಪಾಸಣೆಯನ್ನು ಕೈಗೊಳ್ಳುತ್ತಿದೆ ಮತ್ತು ಈವರೆಗೂ 11 ಆಫೀಸ ಕಛೇರಿಗಳ ಅನಿರೀಕ್ಷಿತ ತಪಾಸಣೆ ಕೈಗೊಂಡಿರುತ್ತದೆ. ತಪ್ಪಿತಸ್ಥ ಅಧಿಕಾರಿಗಳು:ನೌಕರರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ.

## 17. ಕಾನೂನು ಕೋಶ

ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಅನುವಾಗುವಂತೆ ಹಾಗೂ ಹಿಂಬಾಲಿಕಾ ಕ್ರಮಗಳನ್ನು ಅನುಸರಿಸಲು ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ 'ಏಳು ಕಾನೂನು ಕೋಶಗಳನ್ನು ಸರ್ಕಾರದ ಆದೇಶದ ಸಂಖ್ಯೆ:ಡಿಪಿಎಆರ 50 ಎಸಸಿಪಿ 87 ದಿನಾಂಕ ನವೆಂಬರ 21, 1987ರಲ್ಲಿ ಸೃಜಿಸಲಾಯಿತು. ಕಂದಾಯ ಇಲಾಖೆಗೆ ಮಾತ್ರ ಪ್ರತ್ಯೇಕ ಕಾನೂನುಕೋಶವನ್ನು ಸೃಜಿಸಲಾಯಿತು. ಆದೇಶದಲ್ಲಿ ಸೂಚಿಸಿರುವಂತೆ ಹಿಂಬಾಲಿಕಾ ಕ್ರಮವನ್ನು ಅನುಸರಿಸುತ್ತಾ ಬರಲಾಗಿದೆ.

ಇದು ಅಸ್ತಿತ್ವಕ್ಕೆ ಬಂದಮೇಲೆ ಈ ಕೆಳಗಿನಂತೆ ಪ್ರಕರಣಗಳು ವಿಲೇವಾರಿಯಾಗಿದೆ.

| ನ್ಯಾಯಾಲಯದ ಹೆಸರು | 1987 ರಿಂದ 1994ರ ವರೆಗೆ ಬಂದ ಪ್ರಕರಣಗಳು | ಇತ್ಯರ್ಥವಾದ ಪ್ರಕರಣಗಳು | ಬಾಕಿ ಇರುವ ಪ್ರಕರಣಗಳು |
|---|---|---|---|
| 1) ಉಚ್ಚ ನ್ಯಾಯಾಲಯ | 8392 | 4532 | 3869 |
| 2) ಕರ್ನಾಟಕ ಆಡಳಿತ ನ್ಯಾಯಮಂಡಳಿ | 5243 | 3208 | 2035 |
| 3) ಇತರೆ ನ್ಯಾಯಾಲಯಗಳು | 2582 | 952 | 1630 |

## 18. ಕಂದಾಯ ಕೈಪಿಡಿ

1983ರಲ್ಲಿ ನಿವೃತ್ತ ಐ.ಎ.ಎಸ. ಅಧಿಕಾರಿ ಶ್ರೀ ಕೆ.ಬಾಲಸುಬ್ರಹ್ಮಣ್ಯಂ ರವರು ಕಂದಾಯ ಕೈಪಿಡಿ ತಯಾರಿಸಿ ಸಲ್ಲಿಸಿದ್ದರು. ತದನಂತರ ಕಂದಾಯ ಇಲಾಖೆಯ ಆಡಳಿತದಲ್ಲಿ ಬಹಳಷ್ಟು ಬದಲಾವಣೆಗಳಾಗಿರುತ್ತದೆ. ಹೊಸ ಕಾಯ್ದೆಗಳು ಮತ್ತು ನಿಯಮಗಳು ಜಾರಿಯಲ್ಲಿರುತ್ತವೆ. ಆದಕಾರಣ ಕಂದಾಯ ಕೈಪಿಡಿಯನ್ನು ಇಂದೀಕರಿಸಬೇಕಾಗಿದೆ. ಕಂದಾಯ ಕೈಪಿಡಿಯನ್ನು ಇಂದೀಕರಿಸುವ ಸಲುವಾಗಿ ಸರ್ಕಾರದ ಆದೇಶ ಸಂಖ್ಯೆ: ಸಿಬಸುಇ:21:ಎಸಎನವಿ:94 ದಿನಾಂಕ 16-9-94ರಲ್ಲಿ ಕಂದಾಯ ಇಲಾಖೆಯಲ್ಲಿ ಒಂದು ವರ್ಷದ ಅವಧಿಗೆ ವಿಶೇಷ ಅಧಿಕಾರಿಗಳ ಹುದ್ದೆಯನ್ನು ಸೃಷ್ಟಿಸಿದೆ. ಇಂದೀಕರಣದ ಕೆಲಸವು ಪ್ರಗತಿಯಲ್ಲಿದೆ.

## 19. ವಕ್ಫ

ವಕ್ಫ ಕಾಯಿದೆ, 1954ರ ಅಡಿಯಲ್ಲಿ ಕರ್ನಾಟಕ ವಕ್ಫ ಮಂಡಳಿಯನ್ನು 1961ರಲ್ಲಿ ರಚಿಸಲಾಗಿದ್ದು, ಇದು ಒಂದು ಅಟಾನಾಮಸ ಮಂಡಳಿಯಾಗಿರುತ್ತದೆ. ಈ ಮಂಡಳಿಯ ಮುಖ್ಯ ಉದ್ದೇಶವು ರಾಜ್ಯದಲ್ಲಿ ಇರುವ ನೋಂದಾಯಿತ ವಕ್ಫ ಸಂಸ್ಥೆಗಳ ಸ್ವತ್ತುಗಳ ರಕ್ಷಣೆ, ನಿಯಂತ್ರಣ, ಉಸ್ತುವಾರಿ ಮತ್ತು ಆಡಳಿತ ನಿರ್ವಹಣೆಗಳಾಗಿರುತ್ತವೆ. ಈ ಸಂಸ್ಥೆಯಿಂದ ಬರುವ ವರಮಾನವನ್ನು ವಕ್ಫ ಕಾರ್ಯಕ್ರಮಗಳಿಗಾಗಿ ಉಪಯೋಗಿಸಲಾಗುತ್ತದೆ. ರಾಜ್ಯಾದ್ಯಂತ 21,133 ವಕ್ಫ ಸಂಸ್ಥೆಗಳು ಇರುತ್ತವೆ. ಅವುಗಳಲ್ಲಿ

11,166 ಮಸೀದಿಗಳು, 2626 ಖಬ್ರಸ್ಥಾನಗಳು ಮತ್ತು 1799 ಇದ್ಗಾಗಳು ಇರುತ್ತವೆ. ಮುಜರಾಯಿ ಇಲಾಖೆಯ ವತಿಯಿಂದ ವರ್ಗಾವಣೆಗೊಂಡ 456 ಮುಜರಾಯಿ ವಕ್ಫ್ ಸಂಸ್ಥೆಗಳು ಅವುಗಳನ್ನು ಒಳಗೊಂಡಿದೆ. ವಕ್ಫ್ ಕಾಯಿದೆ 1954ರ ಕಲಂ 43(1)ರ ಅಡಿಯಲ್ಲಿ 50 ವಕ್ಫ್ ಸಂಸ್ಥೆಗಳು ಈ ಮಂಡಳಿಯ ನೇರ ನಿಯಮಕ್ಕೆ ಒಳಪಟ್ಟಿರುತ್ತದೆ.

2) <u>ಮಂಡಳಿಯ ಹಣಕಾಸು</u>:

ವಕ್ಫ್ ಕಾಯಿದೆ 1954ರ ಕಲಂ 46(1)ರ ಅಡಿಯಲ್ಲಿ ಕರ್ನಾಟಕ ವಕ್ಫ್ ಮಂಡಳಿಯು ಈ ಸಂಸ್ಥೆಗಳಿಂದ ಶೇಕಡ 6ರ ವರಮಾನವನ್ನು ಪಡೆಯುತ್ತಾ ಇರುತ್ತದೆ. ಈ ಸಾಲಿನಲ್ಲಿ ಜನವರಿ 95ರವರೆಗೂ ಮಂಡಳಿಯು ರೂ 19 ಲಕ್ಷಗಳ ವರಮಾನವನ್ನು ಪಡೆದಿರುತ್ತದೆ. ಇದರ ಜೊತೆಗೆ ಮಂಡಳಿಯು ಬಾಡಿಗೆ ನೀಡಿರುವ ಕಟ್ಟಡದ ವತಿಯಿಂದ ಪ್ರತಿ ವರ್ಷವೂ ರೂ.10,30,960–20 ಗಳ ವರಮಾನವನ್ನು ಪಡೆಯುತ್ತಾ ಇರುತ್ತದೆ. ಸರ್ಕಾರವು ಮಂಡಳಿಯ ನಿರ್ವಹಣಾ ವೆಚ್ಚ ಮತ್ತು ನೌಕರರುಗಳ ಸಂಬಳದ ವೆಚ್ಚವನ್ನು ಸಹಾಯಧನದ ಮೂಲಕ ಭರಿಸುತ್ತದೆ. ನಿರ್ವಹಣಾ ವೆಚ್ಚದ ಸಲುವಾಗಿ ಈ ಸಾಲಿನಲ್ಲಿ ಸರ್ಕಾರವು ರೂ. 68.50 ಲಕ್ಷಗಳಿಗೆ ಮಂಜೂರಾತಿ ನೀಡಿದೆ.

3) <u>ವಕ್ಫ್ ಸಂಸ್ಥೆಗಳ ರಿಪೇರಿ ಮತ್ತು ಜೀರ್ಣೋದ್ಧಾರ:</u>

ನಿರ್ವಹಣಾ ವೆಚ್ಚವೂ ಸೇರಿದಂತೆ ವಕ್ಫ್ ಸಂಸ್ಥೆಗಳ ರಿಪೇರಿ ಮತ್ತು ಜೀರ್ಣೋದ್ಧಾರ ಸಲುವಾಗಿ ಸರ್ಕಾರವು ಉಚಿತವಾಗಿ ಅನುದಾನವನ್ನು ನೀಡುತ್ತದೆ. 1994–95ನೇ ಸಾಲಿನ ಆಯವ್ಯಯದಲ್ಲಿ ರೂ. 2 ಕೋಟಿಗಳನ್ನು ಒದಗಿಸಿಕೊಳ್ಳಲಾಗಿದೆ. ಇದರ ಪೈಕಿ ರೂ. 1 ಕೋಟಿಗಳನ್ನು 424 ವಕ್ಫ್ ಸಂಸ್ಥೆಗಳಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

4) <u>ಕರ್ನಾಟಕ ರಾಜ್ಯ ವಕ್ಫ್ ಕೌನ್ಸಿಲ್:</u>

ಕರ್ನಾಟಕ ರಾಜ್ಯ ವಕ್ಫ್ ಕೌನ್ಸಿಲ್, ರಾಜ್ಯ ಪತ್ರದ ವಿಶೇಷ ಪತ್ರಿಕೆಯಲ್ಲಿ ದಿನಾಂಕ 26–3–92ರಂದು ಸರ್ಕಾರಿ ಆದೇಶದ ಪ್ರಕಟಣೆ ಮೂಲಕ ಜಾರಿಗೆ ಬಂದಿರುತ್ತವೆ. ಇದು ರಾಜ್ಯದಲ್ಲಿರುವ ವಕ್ಫ್ ಸಂಸ್ಥೆಗಳನ್ನು ಅಭಿವೃದ್ಧಿ ಪಡಿಸಲು ಸಾಲದ ರೂಪದಲ್ಲಿ ಆರ್ಥಿಕ ಸಹಾಯವನ್ನು ನೀಡುತ್ತದೆ. ಈ ಸಾಲವನ್ನು ವಕ್ಫ್ ಸಂಸ್ಥೆಗಳ [illegible] ಜೊತೆಗೆ ಕಂತುಗಳಲ್ಲಿ ವಾಪಸ್ಸು ಮಾಡಬೇಕಾಗಿರುತ್ತದೆ. ಪ್ರಸಕ್ತ ಸಾಲಿನ ಈ ಯೋಜನೆಯ ಅಡಿಯಲ್ಲಿ ವಕ್ಫ್ ಸ್ವತ್ತುಗಳ ಅಭಿವೃದ್ಧಿಗಾಗಿ ರೂ. 63 ಲಕ್ಷಗಳಿಗೆ ಸರ್ಕಾರವು ಮಂಜೂರಾತಿ ನೀಡಿದೆ.

5) ಕರ್ನಾಟಕ ಸ್ಟೇಟ್ ವಕ್ಫ್ ಫೌಂಡೇಷನ್ ಫಾರ ಹ್ಯೂಮನ್ ಡೆವಲಪ್‌ಮೆಂಟ್:

ರಾಜ್ಯದಲ್ಲಿನ ಆರ್ಥಿಕವಾಗಿ ಹಿಂದುಳಿದ ಮುಸ್ಲಿಂ ಮಹಿಳೆಯರ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಸರ್ಕಾರವು ಇದನ್ನು 1992ರಲ್ಲಿ ರಚಿಸಿದೆ. ಸರ್ಕಾರವು ಈ ಫೌಂಡೇಷನ್‌ಗೆ ಈ ಕೆಳಕಂಡ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ.

| ವರ್ಷ | ರೂ. ಲಕ್ಷಗಳಲ್ಲಿ |
|---|---|
| 1991–92 | 25.00 |
| 1992–93 | 25.00 |
| 1993–94 | 50.00 |
| 1994–95 | 50.00 |

ಪ್ರಸಕ್ತ ಸಾಲಿನವರೆಗೂ ಈ ಫೌಂಡೇಷನ್ ವತಿಯಿಂದ ಕೆಳಕಂಡ ಸೌಲಭ್ಯಗಳನ್ನು ಫಲಾನುಭವಿಗಳಿಗೆ ನೀಡಲಾಗಿದೆ.

1) ಹೊಲಿಗೆ ಯಂತ್ರಗಳು — 5,059
2) ನಿಟ್ಟಿಂಗ್ ಯಂತ್ರಗಳು — 16
3) ಬೆರಳಚ್ಚು ಯಂತ್ರಗಳು — 337
4) ವೈದ್ಯಕೀಯ ಸಹಾಯ — 5 ಸಂಸ್ಥೆಗಳು
5) ನರ್ಸರಿ ಶಾಲೆಗಳ ಉಪಾಧ್ಯಾಯರಿಗೆ ಸಂಬಳ — 21 ಶಾಲೆಗಳು
6) ಪುಸ್ತಕಗಳು : ಉಪಕರಣಗಳು 21

6) ವ್ಯಾಜ್ಯ ಪ್ರಕರಣಗಳು:

ರಾಜ್ಯದ್ಯಂತ ಇರುವ ಕೆಳಗಿನ ನ್ಯಾಯಾಲಯಗಳಲ್ಲಿ ಸುಮಾರು 1055 ದಾವೆಗಳು ಬಾಕಿ ಇರುತ್ತವೆ. 895 ರಿಟ್ ಅರ್ಜಿಗಳು ಮತ್ತು 4 ವಿಷಯಗಳ ಪ್ರಕರಣಗಳು ಕ್ರಮವಾಗಿ ಉಚ್ಛ ನ್ಯಾಯಾಲಯ ಹಾಗೂ ಸರ್ವೋಚ್ಛ ನ್ಯಾಯಾಲಯಗಳಲ್ಲಿ ಬಾಕಿ ಇರುತ್ತವೆ. ಮಂಡಳಿಯ ವತಿಯಿಂದ ಈ ಪ್ರಕರಣಗಳನ್ನು ಸರ್ಕಾರದ ಪರವಾಗಿ ಎದುರಿಸಲು ಸಾಕಷ್ಟು ವಕೀಲರುಗಳನ್ನು ನೇಮಕ ಮಾಡಲಾಗಿದೆ.

7) ವಕ್ಫ್ ವಿಚಾರಣಾ ಆಯೋಗ:

ಆಯೋಗಗಳ ಕಾಯಿದೆ 1952ರ ಅಡಿಯಲ್ಲಿ 1990ರಲ್ಲಿ ಸರ್ಕಾರವು ರಾಜ್ಯದಲ್ಲಿನ ವಕ್ಫ್ ಸಂಸ್ಥೆಗಳ ಹಾ ಮತ್ತು ಆಸ್ತಿ ದುರುಪಯೋಗ ಮುಂತಾದವುಗಳನ್ನು ಪರಿಶೀಲಿಸಲು ಹಾಗೂ ಅವುಗಳನ್ನು ಸಂದಿಸಲು ಸರ್ಕಾರವು ಆಯೋಗವನ್ನು ರಚಿಸಿದ್ದು ಇದರ ಅವಧಿಯು ದಿನಾಂಕ 31–5–94ಕ್ಕೆ ಮುಕ್ತಾಯವಾಗಿರುತ್ತದೆ. ಈ ಆಯೋಗವು ತನ್ನ ವರದಿಯನ್ನು 316 ಪ್ರಕರಣಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಲ್ಲಿಸಿದ್ದು ಇದನ್ನು ಪರಿಶೀಲಿಸಲಾಗುತ್ತಿದೆ.

RB N95 04137
COMMUNITY HEALTH CELL
LIBRARY AND DOCUMENTATION UNIT
BANGALORE.

## 20. ಹಜ್

### 1) ರಾಜ್ಯ ಹಜ್ ಸಮಿತಿಯ ಪುನರ ರಚನೆ:

ರಾಜ್ಯ ಸರ್ಕಾರವು ರಾಜ್ಯ ಹಜ್ ಸಮಿತಿಯನ್ನು ಪುನರ ರಚಿಸಲು ಪ್ರಸ್ತಾವಿಸಿದೆ.

### 2) ಹಜ್ ಯಾತ್ರೆಯ ಪ್ರಕಟಣೆ:

1995ನೇ ವರ್ಷದ ಅಂದರೆ ಹಿಜರಿ 1415ರ ಹಜ್ ಯಾತ್ರೆಯನ್ನು (ವಿಮಾನ ಯಾನದಿಂದ ಮಾತ್ರ) ಪ್ರಕಟಿಸಲಾಯಿತು. ಹಜ್ ಯಾತ್ರೆಗಾಗಿ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕವನ್ನು 10-12-1994 ಎಂದು ನಿಗದಿಪಡಿಸಲಾಯಿತು.

### 3) ಸೌದಿ ಅರೇಬಿಯಾದಲ್ಲಿ ಯಾತ್ರಾರ್ಥಿಗಳ ವಸತಿ ಸೌಕರ್ಯವನ್ನು ಅಂತ್ಯ ಮಾಡುವ ಸಲುವಾಗಿ ರಾಜ್ಯ ಪ್ರತಿನಿಧಿಯನ್ನು ನಿಯೋಜಿಸುವ ಕುರಿತು:

ಹಜ್ 1995ಗೆ ಕರ್ನಾಟಕ ರಾಜ್ಯದ ಯಾತ್ರಾರ್ಥಿಗಳಿಗಾಗಿ ಮೆಕ್ಕಾ ಮತ್ತು ಮದೀನದಲ್ಲಿ ವಸತಿ ಸೌಕರ್ಯವನ್ನು ಕಲ್ಪಿಸಿ ಕೊಡುವ ಕುರಿತು, ರಾಜ್ಯ ಹಜ್ ಸಮಿತಿಯ ಅಧ್ಯಕ್ಷರ ಶಿಫಾರಸ್ಸಿನ ಮೇರೆಗೆ ಭಾರತ ಸರ್ಕಾರದ ವಿದೇಶಾಂಗ ಖಾತೆ ಇಲಾಖೆಯವರು ಸಹಕಾರ ಸಂಘ ಸಂಸ್ಥೆಗಳ ಉಪ ರಿಜಸ್ಟ್ರಾರ ಆಗಿ, ನಿಯೋಜನೆ ಮೇರೆ ಬೆಂಗಳೂರು ಕೆ.ಎ.ಟಿ. (ಸಹಕಾರ) ಇಲಾಖೆಯಲ್ಲಿ ರಾಜ್ಯ ಪ್ರತಿನಿಧಿಯಾಗಿ ಕೆಲಸ ನಿರ್ವಹಿಸುತ್ತಿರುವ ಶ್ರೀ ಮೊಹಮ್ಮದ ಸಲೀಂರವರನ್ನು ನಿಯೋಜಿಸಲಾಗಿದೆ. ಈ ನಿಯೋಜನೆಗೆ ಸಂಬಂಧಪಟ್ಟಂತೆ ತಗಲುವ ವೆಚ್ಚ ರೂ. 50,000-00 ಯನ್ನು ರಾಜ್ಯ ಹಜ್ ಸಮಿತಿಯು ಭರಿಸುತ್ತದೆ.

### 4) ವಿದೇಶಿ ವಿನಿಮಯ ಹಣ:

ಕೇಂದ್ರ ಹಜ್ ಸಮಿತಿ, ಬೊಂಬಾಯಿ ಈ ಬಾರಿಯೂ ಸಹ ಭಾರತೀಯ ಯಾತ್ರಾರ್ಥಿಗಳಿಗೆ ವಿದೇಶ ವಿನಿಮಯ ಸೌದಿ ರಿಯಾಲ 5500: ಇಲ್ಲವೇ ಸೌದಿ ರಿಯಾಲ 4600: ಅಂತ್ಯ ಮಾಡುವ ಸೌಲಭ್ಯವನ್ನು ಕಲ್ಪಿಸಿಕೊಟ್ಟಿದೆ.

### 5) 1995ರ ಹಜಿನ ವಿಮಾನ ಯಾನದಿಂದ ಪಯಣಿಸುವ ಯಾತ್ರಾರ್ಥಿಗಳ ಕೋಟಾ:

ಸೌದಿ ಅರೇಬಿಯಾಕ್ಕೆ ಹಜ್ ಯಾತ್ರೆಗಾಗಿ ಪಯಣಿಸುವ ಎಲ್ಲಾ ಯಾತ್ರಿಗಳು ಈ ಬಾರಿ ವಿಮಾನ ಯಾನದಿಂದಲೇ ಪಯಣಿಸುವ ಸೌಕರ್ಯವನ್ನು ಬೊಂಬಾಯಿಯ ಕೇಂದ್ರ ಹಜ್ ಸಮಿತಿಯು ಒದಗಿಸಿದೆ. ಕೇಂದ್ರ ಸರ್ಕಾರವು ಹಡಗಿನಿಂದ ಪಯಣಿಸುವ ಸೌಲಭ್ಯವನ್ನು ಕೈಬಿಟ್ಟಿರುವುದು ಇದಕ್ಕೆ ಕಾರಣವಾಗಿದೆ.

ಕರ್ನಾಟಕಕ್ಕೆ 1995ರ ಹಜಗಾಗಿ ಈ ಕೆಳಕಂಡಂತೆ ಕೇಂದ್ರ ಹಜ್ ಸಮಿತಿಯು ಕೋಟಾವನ್ನು ನೀಡಿದೆ:

| | | |
|---|---|---|
| ವಿದೇಶಿ ವಿನಿಮಯ ಹಣದ ಸಹಿತ | : | 1291 |
| ವಿದೇಶಿ ವಿನಿಮಯ ಹಣದ ರಹಿತ | : | 87 |
| ಒಟ್ಟು | : | 1378 |

6) ಯಾತ್ರಿಗಳಿಗೆ ಚುಚ್ಚು ಮದ್ದನ್ನು ನೀಡುವ ಬಗ್ಗೆ:

ಭಾರತೀಯರು ಸರಹದ್ದನ್ನು ದಾಟುವ ಮೊದಲು ಕಾಲರಾ ಹಾಗೂ ಮೆನಿಜೈಟಿಸ ಚುಚ್ಚು ಮದ್ದನ್ನು ಯಾತ್ರಿಗಳು ಹಾಕಿಸಿಕೊಳ್ಳುವುದು ಅವಶ್ಯಕವಾಗಿದೆ. ಆಯ್ಕೆಯಾದ ಎಲ್ಲಾ ಹಜ್ ಯಾತ್ರಿಗಳು ಆಯಾ ಜಿಲ್ಲೆಯ ವೈದ್ಯಾಧಿಕಾರಿ : ಆಸ್ಪತ್ರೆಯ ಸೂಪರಿಂಟೆಂಡೆಂಟರವರ ಮೇಲ್ವಿಚಾರಣೆಯಲ್ಲಿ ಕಾಲರಾ ಮತ್ತು ಮೆನಿಜೈಟಿಸ ಚುಚ್ಚು ಮದ್ದನ್ನು ಆಯಾ ಜಿಲ್ಲೆಗಳಲ್ಲಿ ನೀಡಲಾಯಿತು.

7) ಖಾದಿಮುಲ್ ಹುಜ್ಜಾಜ ನಿಯೋಜನೆ:

1994ರಲ್ಲೂ ಸಹ ಈ ಹಿಂದಿನಂತೆ ಕರ್ನಾಟಕ ರಾಜ್ಯ ಹಜ್ ಯಾತ್ರಿಗಳ ಸೇವೆಯನ್ನು ಮಾಡಲು ಕರ್ನಾಟಕ ರಾಜ್ಯ ಹಜ್ ಸಮಿತಿಯ ವತಿಯಿಂದ ಇಬ್ಬರು ''ಖಾದಿಮುಲ್ ಹುಜ್ಜಾಜ'' ರನ್ನು ಸೌದಿ ಅರೇಬಿಯಾಕ್ಕೆ ಹೋಗಿ ಬರಲು ನಿಯೋಜಿಸಲಾಯಿತು. ಇದಕ್ಕೆ ಸಂಬಂಧಪಟ್ಟಂತೆ ಎಲ್ಲಾ ವೆಚ್ಚವನ್ನು ಕರ್ನಾಟಕ ರಾಜ್ಯ ಹಜ್ ಸಮಿತಿ ವತಿಯಿಂದ ಭರಿಸಲಾಯಿತು.

8) ಸಾದತ್ ಹಜ್ ಭವನ:

ಈ ಕಟ್ಟಡದ ಎರಡನೇ ಅಂತಸ್ತು ಪೂರ್ಣಗೊಳ್ಳುವ ಹಂತದಲ್ಲಿದ್ದು, ಈ ಕಟ್ಟಡವನ್ನು ಕಟ್ಟುವ (ನೆಲಮಹಡಿ ಹಾಗೂ ಎರಡು ಮಹಡಿಗಳನ್ನು) ಜವಾಬ್ದಾರಿಯನ್ನು ಹೊತ್ತ ಕರ್ನಾಟಕ ಭೂ ಸೇನಾ ನಿಗಮ ರೂ.93.00 ಲಕ್ಷದ ಪರಿಷ್ಕೃತ ಅಂದಾಜನ್ನು ಒದಗಿಸಿದ್ದು, ಇದಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ರಾಜ್ಯ ಹಜ್ ಸಮಿತಿಯು ರೂ.61.00 ಲಕ್ಷವನ್ನು ಈವರೆವಿಗೆ ಕರ್ನಾಟಕ ಭೂ ಸೇನಾ ನಿಗಮಕ್ಕೆ ಬಿಡುಗಡೆ ಮಾಡಿದೆ.

9) ಕರ್ನಾಟಕ ರಾಜ್ಯದ ವತಿಯಿಂದ ಸಹಾಯಧನ:

1994–95ನೇ ವರ್ಷಕ್ಕಾಗಿ ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಹಜ್ ಸಮಿತಿಗೆ ರೂ.4.00 ಲಕ್ಷವನ್ನು ಸಹಾಯ ಧನವಾಗಿ ಮಂಜೂರು ಮಾಡಿದೆ.

## 21. ಯೋಜನಾ ಕಾರ್ಯಕ್ರಮಗಳು

1994–95ನೇ ಸಾಲಿನಲ್ಲಿ ಕಂದಾಯ ಇಲಾಖೆಯಲ್ಲಿ ಮುಂದುವರೆದಿರುವ ಯೋಜನಾ ಕಾರ್ಯಕ್ರಮಗಳು ಕೆಳಕಂಡಂತೆ ಇರುತ್ತವೆ.

(ರೂ. ಲಕ್ಷಗಳಲ್ಲಿ)

| ಯೋಜನೆ | ಬಜೆಟ್ ಹಂಚಿಕೆ | ಖರ್ಚು ಮಾಡಬಹುದಾದ ಮೊತ್ತ | ಷರಾ |
|---|---|---|---|
| 1) ಮೈಕ್ರೋ ಫಿಲಂ ಘಟಕದ ಸ್ಥಾಪನೆ | 21.00 | 108.00 | ರಾಜ್ಯ ಮತ್ತು ಕೇಂದ್ರ ಸರ್ಕಾರದ ಭಾಗ 50:50 |
| 2) ಎಸ್‌ಎಸ್‌ಟಿಬಿ, ಮೈಸೂರು, ಉನ್ನತೀಕರಣ | 21.00 | | |
| 3) ಗ್ರಾಮಲೆಕ್ಕಾಧಿಕಾರಿಗಳ ವಸತಿ ಗೃಹ ನಿರ್ಮಾಣ | 110.00 | 65.00 | — |
| 4) ಭೂದಾಖಲೆಗಳ ಗಣಕೀಕರಣ | 21.00 | — | ಪೂರ್ತಿ ಕೇಂದ್ರದ ಭಾಗ |
| ಒಟ್ಟು: | 173.00 | 173.00 | |

1) ಮೈಕ್ರೋ ಫಿಲಂ ಘಟಕದ ಸ್ಥಾಪನೆ ಮತ್ತು ಮೈಸೂರಿನಲ್ಲಿನ ಎಸ್‌ಎಸ್‌ಟಿಐ ತರಬೇತಿ ಸಂಸ್ಥೆಯ ಉನ್ನತೀಕರಣದ ಯೋಜನೆಯನ್ನು ಶೇಕಡ 50ರ ಕೇಂದ್ರ ಸರ್ಕಾರದ ಸಹಾಯಧನದಿಂದ ಮುಂದುವರೆಸಲಾಗುತ್ತಿದೆ. ಈ ಕಾರ್ಯಕ್ರಮಗಳಿಗೆ ಭೂಕಂದಾಯ ವ್ಯವಸ್ಥೆ ಮತ್ತು ಭೂಮಾಪನ ಇಲಾಖೆಗೆ ರೂ.416 ಲಕ್ಷಗಳನ್ನು ಕೆಳಕಂಡ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

| | ರೂ.ಲಕ್ಷಗಳಲ್ಲಿ |
|---|---|
| 1) ಆಧುನಿಕ ಭೂಮಾಪನ ಉಪಕರಣಗಳು | 60.00 |
| 2) ಜೆರಾಕ್ಸ್ ಕಾಪಿಯರ:ಡಿಜಿಟೈಸರ ಸ್ಕ್ಯಾನರ ಪ್ರಿಂಟರ | 35.00 |
| 3) ಎಸ್‌ಎಸ್‌ಟಿಐ, ಮೈಸೂರು | 120.00 |
| 4) ತರಬೇತಿ ಪಡೆಯುವ ಸಲುವಾಗಿ ಹೈದರಾಬಾದ | 26.00 |
| 5) ವಾಹನಗಳ ಖರೀದಿ | 50.00 |
| 6) ಡ್ರಾಯಿಂಗ ಉಪಕರಣಗಳ ಖರೀದಿ | 25.00 |
| 7) ರೆಕಾರ್ಡ ರೂಂ | 25.00 |
| 8) ಗಣಕೀಕರಣ | 25.00 |
| 9) ಮೈಕ್ರೋ ಫಿಲಂ ಕೆಲಸ | 50.00 |
| ಒಟ್ಟು : | 416.00 ಲಕ್ಷಗಳು |

2) ಗ್ರಾಮಗಳ ಆಡಳಿತವನ್ನು ಬಲಪಡಿಸುವ ದೃಷ್ಟಿಯಿಂದ ಗ್ರಾಮ ಲೆಕ್ಕಿಗರುಗಳಿಗೆ ವಸತಿ ಗೃಹಗಳನ್ನು ನಿರ್ಮಿಸುವ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. 97 ವಸತಿ ಗೃಹಗಳನ್ನು ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಈ ಕೆಲಸವನ್ನು ಕರ್ನಾಟಕ ಭೂಸೇನಾ ನಿಗಮಕ್ಕೆ ವಹಿಸಿಕೊಡಲಾಗಿದೆ. ಈಗಿನ ಅಂದಾಜಿನಂತೆ ಪ್ರತಿ ವಸತಿ ಗೃಹಕ್ಕೆ ತಗಲುವ ವೆಚ್ಚ ಅಂದಾಜು ರೂ. 1.43 ಲಕ್ಷ. 1994–95ನೇ ಸಾಲಿನಲ್ಲಿ ರೂ.55 ಲಕ್ಷಗಳನ್ನು ಈ ಯೋಜನೆಯ ಅಡಿಯಲ್ಲಿ ಬಿಡುಗಡೆ ಮಾಡಲಾಗಿದೆ.

3) ರೈತರುಗಳಿಗೆ ಸರಿಯಾಗಿ ಭೂದಾಖಲೆಗಳನ್ನು ಒದಗಿಸಿ ಕೊಡಲು ಕಂದಾಯ ಇಲಾಖೆಯು ಯಶಸ್ವಿಯಾದಲ್ಲಿ ಇಲಾಖೆಯ ಆಡಳಿತ ಸಮರ್ಪಕವಾಗಿದೆ ಎಂದು ಭಾವಿಸಬಹುದಾಗಿದೆ. ಈ ದಿಶೆಯಲ್ಲಿ ಕೇಂದ್ರ ಸರ್ಕಾರದ ಶೇಕಡ 100ರ ಧನ ಸಹಾಯದೊಂದಿಗೆ ಭೂದಾಖಲೆಗಳನ್ನು ಗಣಕೀಕರಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಯಿತು. ಪ್ರತಿ ಜಿಲ್ಲೆಗೆ ತಗಲುವ ಅಂದಾಜು ವೆಚ್ಚ ರೂ.50 ಲಕ್ಷಗಳಾಗಿರುತ್ತದೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಗಣಕೀಕರಣ ಕಾಮಗಾರಿಯನ್ನು ಪೂರೈಸಿದ್ದು, 2ನೇ ಹಂತದಲ್ಲಿ ಮೈಸೂರು ಮತ್ತು ರಾಯಚೂರು ಜಿಲ್ಲೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಪ್ರಸಕ್ತ ಸಾಲಿನಲ್ಲಿ ಬಿಜಾಪುರ, ಚಿತ್ರದುರ್ಗ, ಕೋಲಾರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಪ್ರಸ್ತಾವಿಸಲಾಗಿದೆ. ಈವರೆವಿಗೂ ಕೇಂದ್ರ ಸರ್ಕಾರದ ವತಿಯಿಂದ ಗುಲ್ಬರ್ಗಾ ಜಿಲ್ಲೆಗೆ ರೂ. 41.00 ಲಕ್ಷ, ರಾಯಚೂರು ಜಿಲ್ಲೆಗೆ ರೂ. 25 ಲಕ್ಷ ಮತ್ತು ಮೈಸೂರು ಜಿಲ್ಲೆಗೆ ರೂ. 35 ಲಕ್ಷವನ್ನು ಈ ಕಾಮಗಾರಿಯ ಸಲುವಾಗಿ ಬಿಡುಗಡೆ ಮಾಡಲಾಗಿದೆ.

ooooo

ಮುದ್ರಕರು :—ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಸರ್ಕಾರಿ ಮುದ್ರಣಾಲಯ ಬೆಂಗಳೂರು.